ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಆಗಸ್ಟ್ 14, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 92 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

# ಕಂಪ್ಯೂಟರೀಕರಣವಾಗಿ, ರೈತರಿಗೆ ತ್ವರಿತ ಸಾಲ ಕೊಡಿ

## ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗೆ ಜಿಲ್ಲಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕ್ಲಾಸ್



ದಾವಣಗೆರೆ, ಆ. 13 - ಉತ್ತರ ಕರ್ನಾಟಕದ ಜಿಲ್ಲಾ ಸಹಕಾರ ಬ್ಯಾಂಕುಗಳು ರೈತರಿಗೆ ದೊಡ್ಡ ಪ್ರಮಾಣದಲ್ಲಿ ಸಾಲ ಕೊಟ್ಟು ಪ್ರಗತಿಗೆ ನೆರವಾಗುತ್ತಿವೆ. ಈ ದಿಸೆಯಲ್ಲಿ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಡಿ.ಸಿ.ಸಿ.) ಹಿಂದೆ ಬಿದ್ದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದಾವಣಗೆರೆ ಜಿಲ್ಲಾ ಸಹಕಾರಿಗಳಿಂದ ನೂತನ ಸಚಿವ ಹಾಗೂ ಶಾಸಕರಿಗೆ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಉತ್ತರ ಕರ್ನಾಟಕದ ಬೆಳಗಾವಿ, ಬಾಗಲಕೋಟೆ, ಬಿಜಾಪುರ ಸೇರಿದಂತೆ ಹಲವು ಜಿಲ್ಲಾ ಬ್ಯಾಂಕುಗಳು ರೈತರಿಗೆ ಹೆಚ್ಚಿನ ಸಾಲ ಕೊಡುತ್ತಿವೆ. ರೈತರು ಅಭಿವೃದ್ಧಿ ಕಾಣುತ್ತಿದ್ದಾರೆ. ಇದೇ ರೀತಿಯ ಅಭಿವೃದ್ಧಿಗೆ ದಾವಣಗೆರೆ ಬ್ಯಾಂಕ್ ಸಹಕರಿಸಬೇಕು. ಪರಿಶಿಷ್ಟರು ಹಾಗೂ ಬಡವರಿಗೆ ಹೆಚ್ಚಿನ ಸಾಲ ಕೊಡಬೇಕು (3ನೇ ಪುಟಕ್ಕೆ)

# ಡಿಜಿಟಲ್ ತಂತ್ರಜ್ಞಾನ, ಅಪರಾಧಿಗಳ ಆಸ್ತಿ ವಶ ನಾಗರಿಕ ಸುರಕ್ಷ ಸಂಹಿತೆಯಲ್ಲಿರುವ ಪ್ರಸ್ತಾವನೆಗಳು

ನವದೆಹಲಿ, ಆ. 13 - ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿರುವ ಭಾರತೀಯ ನಾಗರಿಕ ಸುರಕ್ಷ ಸಂಹಿತೆ (ಬಿ.ಎನ್.ಎಸ್.ಎಸ್.) ಜಾರಿಗೆ ಬಂದಲ್ಲಿ ಘೋಷಿತ ಅಪರಾಧಿಗಳ ಆಸ್ತಿ ವಶ ಹಾಗೂ ಕೆಲ ಪ್ರಕರಣಗಳಲ್ಲಿ ಬಂಧಿತರ ಕೈಗೆ ಕೋಳ ಹಾಕಲು ಅನುಮತಿ ಸೇರಿದಂತೆ, ಹಲವಾರು ಬದಲಾವಣೆಗಳು ಜಾರಿಗೆ ಬರಲಿವೆ.

ಭಾರತೀಯ ನ್ಯಾಯ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಮಸೂದೆಗಳನ್ನು ಲೋಕಸಭೆಯಲ್ಲಿ ಕಳೆದ ಶುಕ್ರವಾರ ಮಂಡಿಸಲಾಗಿದೆ. ಬ್ರಿಟಿಷರ ಕಾಲದ ಐ.ಪಿ.ಸಿ. ಹಾಗೂ ಸಾಕ್ಷ್ಯ ಕಾಯ್ದೆಗಳನ್ನು ಬದಲಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ ಸೇರಿದಂತೆ ಹಲವಾರು ಡಿಜಿಟಲ್ ತಂತ್ರಜ್ಞಾನಗಳನ್ನು ಅಪರಾಧಿ ಪ್ರಕ್ರಿಯೆಯಲ್ಲಿ ಬಳಸಲು ಈ ಮಸೂದೆಗಳು ನೆರವಾಗಲಿವೆ.

ಲೈಂಗಿಕ ಪೀಡನೆ ಹಾಗೂ ಮಾನವ ಕಳ್ಳಸಾಗಣೆ ಪ್ರಕರಣಗಳಲ್ಲಿ ಸರ್ಕಾರಿ ಅಧಿಕಾರಿಗಳು ಸಿಲುಕಿದಾಗ ಅವರ ವಿರುದ್ಧ ದೋಷಾರೋಪಕ್ಕೆ ಪೂರ್ವಾನುಮತಿಯ ಅಗತ್ಯವಿರುವುದಿಲ್ಲ.

ಸರ್ಕಾರಿ ನೌಕರನ ವಿರುದ್ಧ ದೋಷಾರೋಪಕ್ಕಾಗಿ ಸರ್ಕಾರಕ್ಕೆ ಅರ್ಜಿ ಬಂದ 120 ದಿನಗಳಲ್ಲಿ ಅಂಗೀಕರಿಸುವ ಇಲ್ಲವೇ ತಿರಸ್ಕರಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕಿದೆ. ಇಲ್ಲದೇ ಹೋದರೆ, ಅನುಮತಿ ನೀಡಲಾಗಿದೆ ಎಂದು ಭಾವಿಸಲಾಗುವುದು.

ಘೋಷಿತ ಅಪರಾಧಿಗಳು ವಿದೇಶದಲ್ಲಿರುವಾಗ ಅವರ ಆಸ್ತಿ ಜಪ್ತಿಗೂ ಮಸೂದೆಯಲ್ಲಿ ಅವಕಾಶ ಇದೆ. ಈ ಬಗ್ಗೆ ಪೊಲೀಸ್ ವರಿಷ್ಠಾಧಿಕಾರಿ ಇಲ್ಲವೇ ಪೊಲೀಸ್ ಆಯುಕ್ತರು ನ್ಯಾಯಾಲಯಕ್ಕೆ ಮನವಿ ಸಲ್ಲಿಸಬೇಕಿದೆ.

ನೂತನ ಕಾನೂನಿನಡಿ 90 ದಿನಗಳಲ್ಲಿ ಆರೋಪ ಪಟ್ಟಿ ಸಲ್ಲಿಸಬೇಕಿದೆ. ಪರಿಸ್ಥಿತಿ ಗಮನಿಸಿ ನ್ಯಾಯಾಲಯ ಇನ್ನೂ 90 ದಿನ ಕಾಲಾವಕಾಶ ನೀಡಬಹುದು.

ವಿಚಾರಣೆ ಪೂರ್ಣಗೊಂಡ ನಂತರ ಕೆಳ ನ್ಯಾಯಾಲಯ 30 ದಿನಗಳಲ್ಲಿ ತೀರ್ಪು ನೀಡಬೇಕು.

ಅಪರಾಧದ ಸ್ವರೂಪ ಹಾಗೂ ತೀವ್ರತೆ ಪರಿಗಣಿಸಿ ಪೊಲೀಸ್ ಅಧಿಕಾರಿ ಬಂಧಿ ವ್ಯಕ್ತಿಗೆ (4ನೇ ಪುಟಕ್ಕೆ)

## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಮಂಡಿಪೇಟೆಯಲ್ಲಿರುವ ಮೆಡಿಕಲ್ ಎಂಪೋರಿಯಂ ಮಾಲೀಕರೂ, ನಮ್ಮ ಆತ್ಮೀಯ ಒಡನಾಡಿಗಳೂ ಆದ

**ಶ್ರೀ ಹರೀಶ್ ಎನ್.ನಾಯಕ್**

ಅವರು ದಿನಾಂಕ 13.08.2023ರ ಭಾನುವಾರ ರಾತ್ರಿ 11.20ಕ್ಕೆ ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಪ್ರೇರಣಾ ಯುವ ಸಂಸ್ಥೆ (ರಿ.) ದಾವಣಗೆರೆ.**

## ತೃತೀಯ ವರ್ಷದ ಪುಣ್ಯಸ್ಮರಣೆ



**ಕೆ.ಎಂ. ಶಿವಮೂರ್ತಯ್ಯ ಕಂಬಳಿ**

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಮಗ : ಶ್ರೀ ಕೆ.ಎಂ. ರಂಜಿತ್, ರೂಪ
ಮೊಮ್ಮಕ್ಕಳಾದ : ಅನ್ವಿಕ, ಅನ್ವಿಕ
ದಿ. ಕೆ.ಎಂ. ಶಾಂತ
ಕೆ.ಎಂ. ವೀರಭದ್ರಯ್ಯ ಅಂಡ್ ಸನ್ಸ್
ಶ್ರೀಮತಿ ಜಯಲಕ್ಷ್ಮಿ ದಿ. ಕೆ.ಎಂ. ವೀರಯ್ಯ ಮತ್ತು ಮಕ್ಕಳು
ಶ್ರೀಮತಿ ವಿಮಲ ದಿ. ಕೆ.ಎಂ. ಬಸವರಾಜಯ್ಯ ಮತ್ತು ಮಕ್ಕಳು
ಕೆ.ಎಂ. ರುದ್ರಯ್ಯ ಮತ್ತು ಮಕ್ಕಳು, ಕಂಬಳಿ ಸಹೋದರರು

## ಮೆಡಿಕಲ್ ಎಂಪೋರಿಯಂ ಮಾಲೀಕರಾದ ಹರೀಶ್ ಎನ್. ನಾಯಕ್ ನಿಧನ



ದಾವಣಗೆರೆ ಮಂಡಿಪೇಟೆಯಲ್ಲಿರುವ ಮೆಡಿಕಲ್ ಎಂಪೋರಿಯಂ ಮಾಲೀಕರಾದ

**ಶ್ರೀ ಹರೀಶ್ ಎನ್.ನಾಯಕ್**

ಅವರು ದಿನಾಂಕ 13.08.2023ರ ಭಾನುವಾರ ರಾತ್ರಿ 11.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 48 ವರ್ಷ ವಯಸ್ಸಾಗಿತ್ತು.
ಮೃತರು ಪತ್ನಿ, ಇಬ್ಬರು ಪುತ್ರರು, ಸಹೋದರರು - ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಹರೀಶ್ ಎನ್.ನಾಯಕ್ ಅವರ ಪಾರ್ಥಿವ ಶರೀರವನ್ನು ದಾವಣಗೆರೆ ಪಿ.ಜೆ.ಬಡಾವಣೆಯ ವಿಶ್ವೇಶ್ವರಯ್ಯ ಉದ್ಯಾನವನ ಹಿಂಭಾಗದ ನಂದಿ ಆಸ್ಪತ್ರೆ ಬಳಿಯ 9ನೇ ಕ್ರಾಸ್‌ನಲ್ಲಿರುವ ಅವರ ಸ್ವಗೃಹದಲ್ಲಿ ದಿನಾಂಕ 14.08.2023ರ ಸೋಮವಾರ ಮಧ್ಯಾಹ್ನ 1 ರವರೆಗೆ ಇಡಲಾಗುವುದು.
ನಂತರ ಮಧ್ಯಾಹ್ನ 2.30ಕ್ಕೆ ದಾವಣಗೆರೆ ಪಿ.ಬಿ.ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗದವರು

**ಮೆಡಿಕಲ್ ಎಂಪೋರಿಯಂ**

ಮಂಡಿಪೇಟೆ, ದಾವಣಗೆರೆ. ಮೊ : 98453 52456

## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಮಂಡಿಪೇಟೆಯಲ್ಲಿರುವ ಮೆಡಿಕಲ್ ಎಂಪೋರಿಯಂ ಮಾಲೀಕರಾದ

**ಶ್ರೀ ಹರೀಶ್ ಎನ್.ನಾಯಕ್**

ಅವರು ದಿನಾಂಕ 13.08.2023ರ ಭಾನುವಾರ ರಾತ್ರಿ 11.20ಕ್ಕೆ ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

❖ ರಾಘುವೇಂದ್ರ ಜಿ. ವೆರ್ಣೇಕರ್
❖ ಶ್ರೀಕಾಂತ್ ಎ. ಜೈನ್
❖ ಪಾಂಡುರಂಗಪ್ಪ ಬೊಮ್ಮಯ್ಯ ವೆರ್ಣೇಕರ್, ಜ್ಯೂಯಲರ್ಸ್ ದೊಡ್ಡಪೇಟೆ.
❖ ಪಾಂಡುರಂಗಪ್ಪ ಬೊಮ್ಮಯ್ಯ ವೆರ್ಣೇಕರ್, ಜ್ಯೂಯಲರ್ಸ್, ಮಂಡಿಪೇಟೆ.
❖ ಶ್ರೀ ಚೈತನ್ಯ ಜ್ಯೂಯಲರ್ಸ್ ಮಾರ್ಟ್, ಚಾಮರಾಜಪೇಟೆ
❖ ಶ್ರೀ ಗುರು ಮಹಾರಾಜ ಜ್ಯೂಯಲರ್ಸ್ ಮಾರ್ಟ್, ಮಂಡಿಪೇಟೆ.
❖ ಶ್ರೀ ಮೌಳ್ವಸ ಜ್ಯೂಯಲರ್ಸ್, ಮಂಡಿಪೇಟೆ.
❖ ಶ್ರೀ ಸರಸ್ವತಿ ಪಾಂಡುರಂಗ ವೆರ್ಣೇಕರ್ ಜ್ಯೂಯಲರ್ಸ್, ಮಂಡಿಪೇಟೆ.

# ಅಭಿವೃದ್ಧಿ ವಿಚಾರದಲ್ಲಿ ಹೊಳೆಸಿರಿಗೆರೆ ಗ್ರಾಮಸ್ಥರ ಒಗ್ಗಟ್ಟು ಮಾದರಿ

## ಕೃಷಿ ಉಗ್ರಾಣ ಕಟ್ಟಡಗಳ ಉದ್ಘಾಟನೆಯಲ್ಲಿ ಶಾಸಕರಾದ ಬಿ.ಪಿ.ಹರೀಶ್, ಡಿ.ಜಿ.ಶಾಂತನಗೌಡ ಮೆಚ್ಚುಗೆ



ಮಲೇಬೆನ್ನೂರು, ಆ.13- ಹೊಳೆಸಿರಿಗೆರೆ ಗ್ರಾಮಕ್ಕೆ ಅವಶ್ಯವಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಈಗಿರುವ 10 ಹಾಸಿಗೆಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 50 ಹಾಸಿಗೆಯ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೆ ಏರಿಸಲು ನಿರಂತರ ಪ್ರಯತ್ನ ಮಾಡುವುದಾಗಿ ಶಾಸಕ ಬಿ.ಪಿ. ಹರೀಶ್ ಗ್ರಾಮಸ್ಥರಿಗೆ ಭರವಸೆ ನೀಡಿದರು.

ಭಾನುವಾರ ಹೊಳೆಸಿರಿಗೆರೆ ಗ್ರಾಮದ ಕಲ್ಲೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಸಿರಿಗೆರೆ ವಿವಿಧೋದ್ದೇಶ ಪ್ರಾಥಮಿಕ ಕೃಷಿ ಗ್ರಾಮೀಣ ಸಹಕಾರ ಸಂಘದ ಉಗ್ರಾಣ ಮತ್ತು ಸಿರಿಗೆರೆ ಭದ್ರಾ ವಿವಿಧೋದ್ದೇಶ ಪ್ರಾಥಮಿಕ ಕೃಷಿ ಗ್ರಾಮೀಣ ಸಹಕಾರ ಸಂಘದ ಉಗ್ರಾಣ ಹಾಗೂ ವೇಬ್ರಿಡ್ಜ್ ಉದ್ಘಾಟನಾ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ಹಳ್ಳಿಗಳ ರೈತರಿಗೆ ನೀರಿನ ತೊಂದರೆ ಆಗುತ್ತಿರುವುದನ್ನು ಗಮನಿಸಿಯೇ ನಾನು ಈ ಹಿಂದೆ ಶಾಸಕನಾಗಿದ್ದಾಗ ಭೈರನಪಾದ ಏತ ನೀರಾವರಿ ಯೋಜನೆಗೆ ಭೂಮಿ ಪೂಜೆ ಮಾಡಿದ್ದೇವೆ. ನಂತರ ಬಂದ ಸರ್ಕಾರಗಳು ಈ ಯೋಜನೆಗೆ ಅನುದಾನ ಬಿಡುಗಡ ಮಾಡದಿರುವ ಕಾರಣ ಯೋಜನೆ ವಿಳಂಬವಾಗಿದೆ. ಈಗ ಕ್ಷೇತ್ರದ ಜನ ನನ್ನನ್ನು ಶಾಸಕನನ್ನಾಗಿ ಮಾಡಿದ್ದಾರೆ. ಆದರೆ, ನಮ್ಮ ಬಿಜೆಪಿ ಸರ್ಕಾರ ಬರಲಿಲ್ಲ, ಆದರೂ ನನ್ನ ಪ್ರಯತ್ನವನ್ನು ಕೈಬಿಡಲ್ಲ. ಈ ವರ್ಷ ಗ್ಯಾರಂಟಿ ಯೋಜನೆಗಳಿಂದಾಗಿ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿದ್ದು, ಮುಂದಿನ ವರ್ಷ ಜಿಲ್ಲಾ ಉಸ್ತುವಾರಿ ಸಚಿವರ ಹಾಗೂ ಸ್ಥಳೀಯ ಕಾಂಗ್ರೆಸ್ ನಾಯಕರ ಸಹಕಾರ ಪಡೆದು ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಹರೀಶ್ ಹೇಳಿದರು.

ಹೊನ್ನಾಳಿ ತಾಲ್ಲೂಕಿನ 18 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆಯಲ್ಲಿ ಕೊಮಾರನಹಳ್ಳಿ ಕೆರೆಗೂ ನೀರು ಹರಿಸುವ ಕಾಮಗಾರಿ ಭರದಿಂದ ನಡೆದಿದೆ. ದೇವರ ಬೆಳಕೆರೆ ಪಿಕಪ್ ಡ್ಯಾಮ್‌ಗೂ ನದಿ ನೀರು ತುಂಬಿಸುವ ಯೋಜನೆಯನ್ನೂ ಮುಂದಿನ ವರ್ಷಗಳಲ್ಲಿ ಮಂಜೂರು ಮಾಡಿಸುವ ಪ್ರಯತ್ನ ಮಾಡುತ್ತೇನೆ.

ಹೊಳೆಸಿರಿಗೆರೆ ಗ್ರಾಮದ ಎರಡೂ ಕೃಷಿ ಸಹಕಾರ ಸಂಘಗಳು ಆರೋಗ್ಯಕರ ಸ್ಪರ್ಧೆಯಲ್ಲಿ ಉತ್ತಮ ಸಾಧನೆ ಮಾಡಿದ್ದು, ರೈತರಿಗೆ 16 ಕೋಟಿ ರೂ. ಕೆ.ಸಿ.ಸಿ. ಸಾಲ ನೀಡಿರುವುದು ಸ್ವಾಗತಾರ್ಹ ಎಂದು ಹರೀಶ್ ಮೆಚ್ಚುಗೆ ವ್ಯಕ್ತಪಡಿಸಿ, ಹೊಳೆಸಿರಿಗೆರೆ ಗ್ರಾಮಸ್ಥರು ಅಭಿವೃದ್ಧಿ ವಿಚಾರದಲ್ಲಿ ಒಗ್ಗಟ್ಟು ಪ್ರದರ್ಶಿಸುವ ಮೂಲಕ ಮಾದರಿಯಾಗಿದ್ದಾರೆ ಎಂದು ಶ್ಲಾಘಿಸಿದರು.

ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ ಮಾತನಾಡಿ, ಒಂದೇ ಊರಿನಲ್ಲಿ 2 ಕೃಷಿ ಸಹಕಾರ ಸಂಘಗಳು ಇರುವುದನ್ನು ನೋಡಿರುವುದು ನನ್ನ ರಾಜಕೀಯ ಜೀವನದಲ್ಲಿ ಇದೇ ಮೊದಲು. ಅದು ಹೊಳೆಸಿರಿಗೆರೆಯಲ್ಲಿ ಎಂದು ಅಚ್ಚರಿ ವ್ಯಕ್ತಪಡಿಸಿದರು.

ಭದ್ರಾ ನೀರಿನ ಸಮಸ್ಯೆ ನಿಮ್ಮ ಭಾಗಕ್ಕೆ ಯಾವತ್ತೂ ಆಗುತ್ತಿರುವ ಬಗ್ಗೆ ಮಾಹಿತಿ ಇದೆ. ಈ ಬಾರಿ ಡ್ಯಾಂ ಭರ್ತಿ ಆಗದಿದ್ದರೂ, ಮುಂಗಾರಿನ ಬೆಳೆಗಳಿಗೆ 100 ದಿನ ನೀರು ಹರಿಸುವ ತೀರ್ಮಾನ ಮಾಡಿದ್ದೇವೆ. ಮಳೆ ಬಂದು ಡ್ಯಾಂ ತುಂಬುವ ವಿಶ್ವಾಸ ಇದ್ದು, ನಿಮಗೆ ನೀರಿನ ತೊಂದರೆ ಆಗದಂತೆ ನೋಡಿಕೊಳ್ಳುತ್ತೇವೆ ಎಂದು ಶಾಂತನಗೌಡರು ಹೇಳಿದರು.

ಹಿರಿಯ ಸಹಕಾರಿ ಧುರೀಣ ಜೆ.ಆರ್. ಷಣ್ಮುಖಪ್ಪ ಮಾತನಾಡಿ, ಡಿಸಿಸಿ ಬ್ಯಾಂಕ್‌ನಿಂದ ಕೊಡುತ್ತಿದ್ದ ಕೃಷಿ ಸಾಲವನ್ನು 300 ಕೋಟಿಯಿಂದ 700 ಕೋಟಿಗೆ ಹೆಚ್ಚಿಸುವ ಮೂಲಕ ಜಿಲ್ಲೆಯ ರೈತರಿಗೆ ನೆರವಾಗಿದ್ದೇವೆ.

ಗ್ರಾಮದ ಹಿರಿಯ ಮುತ್ಸದ್ದಿ ಎನ್.ಜಿ. ನಾಗನಗೌಡ್ರು ಮಾತನಾಡಿ, ಒಗ್ಗಟ್ಟಿನಲ್ಲಿ ಬಲ ಅಷ್ಟೇ ಅಲ್ಲ ಅಭಿವೃದ್ಧಿಯೂ ಇದೆ ಎಂಬುದಕ್ಕೆ ನಮ್ಮ ಗ್ರಾಮ ಸಾಕ್ಷಿಯಾಗಿದೆ. ಇದೇ ಒಗ್ಗಟ್ಟನ್ನು ಕಾಪಾಡಿಕೊಂಡು ಹೋಗೋಣ ಎಂದರು.

ಗ್ರಾಮದ ಮುಖಂಡ ಎಂ.ಜಿ. ಪರಮೇಶ್ವರಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಿ. ಹಾಲೇಶಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು.

### ಡಿಸಿಸಿ ಬ್ಯಾಂಕಿನಿಂದ ನೀಡುತ್ತಿದ್ದ ಕೃಷಿ ಸಾಲ 300 ಕೋಟಿಯಿಂದ 700 ಕೋಟಿಗೆ ಹೆಚ್ಚಳ : ಜೆ.ಆರ್. ಷಣ್ಮುಖಪ್ಪ

ಈ ವೇಳೆ ಸಿರಿಗೆರೆ ಭದ್ರಾ ಪ್ರಾಥಮಿಕ ಕೃಷಿ ಸಹಕಾರ ಸಂಘದ ಸಂಸ್ಥಾಪಕ ಕಾರ್ಯದರ್ಶಿ ಕೆ. ಮಲ್ಲೇಶಪ್ಪ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಬಿ. ಶೇಖರಪ್ಪ, ನಿರ್ದೇಶಕರಾದ ಜಗದೀಶಪ್ಪ ಬಣಕಾರ್, ಜೆ.ಎಸ್. ವೇಣುಗೋಪಾಲರೆಡ್ಡಿ, ಕೆಂಗಲಹಳ್ಳಿ ಷಣ್ಮುಖಪ್ಪ, ಜೆ.ಎನ್. ಸ್ವಾಮಿ, ಆರ್.ಜಿ. ಶ್ರೀನಿವಾಸ್‌ಮೂರ್ತಿ, ಹೆಚ್.ಕೆ. ಪಾಲಾಕ್ಷಪ್ಪ, ಡಿಸಿಸಿ ಬ್ಯಾಂಕ್ ಎಂ ಡಿ ಕೆ.ಎನ್. ನಂಜನಗೌಡ, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕರಾದ ಕತ್ತಲಗೆರೆ ನಾಗರಾಜಪ್ಪ, ಜೀವನ್ ಪ್ರಕಾಶ್, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಹೆಚ್. ಅನ್ನಪೂರ್ಣ, ನಬಾರ್ಡ್ ಅಧಿಕಾರಿ ರಶ್ಮಿರೇಖಾ, ಸಿರಿಗೆರೆ ಭದ್ರಾ ಸಂಘದ ಅಧ್ಯಕ್ಷ ಶ್ಯಾಮನೂರು ಮಂಜಪ್ಪ, ಸಿಇಓ ಎಂ. ಬಸವನಗೌಡ, ಮಾಜಿ ಕಾರ್ಯದರ್ಶಿ ಎನ್.ಎಂ. ಹಾಲಸ್ವಾಮಿ, ಡಿಸಿಸಿ ಬ್ಯಾಂಕಿನ ಮೇಲ್ವಿಚಾರಕರಾದ ಪಿ. ಲಿಂಗನಗೌಡ, ಲೋಕೇಶ್‌ನಾಯ್ಕ, ಭಾನುವಳ್ಳಿ ಶಿವಕುಮಾರ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಕೆ. ಮಹಾಂತೇಶ್ ಸ್ವಾಗತಿಸಿದರು. ಉಪನ್ಯಾಸಕಿ ಹಾಗೂ ದಾವಣಗೆರೆ ತಾಲ್ಲೂಕು ಕಸಾಪ ಅಧ್ಯಕ್ಷೆ ಶ್ರೀಮತಿ ಸುಮತಿ ಜಯ್ಯಪ್ಪ ಉಪನ್ಯಾಸ ನೀಡಿ, ಕಾರ್ಯಕ್ರಮ ನಿರೂಪಿಸಿದರು. ಯಲವಟ್ಟಿ ಪಿಎಸಿಎಸ್ ಸಿಇಓ ಶೇಖರಪ್ಪ ವಂದಿಸಿದರು.

# ನ್ಯಾಯ ವ್ಯವಸ್ಥೆ ಬದಲಾವಣೆಯ ವ್ಯಾಪಕ ಚರ್ಚೆ : ಕಾಂಗ್ರೆಸ್ ಆಗ್ರಹ

ನವದೆಹಲಿ, ಆ. 13 - ಭಾರತೀಯ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆ ತರುವ ಮೂರು ಮಸೂದೆಗಳ ಕುರಿತು ಪರಿಣಿತರು ಹಾಗೂ ಸಾರ್ವಜನಿಕರ ಜೊತೆ ವ್ಯಾಪಕ ಚರ್ಚೆ ನಡೆಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ಸಾರ್ವಜನಿಕ ಸಮಾಲೋಚನೆ ನಡೆಸದೇ, ಕಾನೂನು ಪರಿಣಿತರು, ಅಪರಾಧ ಶಾಸ್ತ್ರಜ್ಞರು ಇತರೆ ಸಂಬಂಧಿಸಿದವರ ಅಭಿಪ್ರಾಯ ಪಡೆಯದೇ ಮೋದಿ ಸರ್ಕಾರ ಮೂರು ಮಸೂದೆಗಳನ್ನು ಮಂಡಿಸಿದೆ. ಅಪರಾಧ ಕಾಯ್ದೆಗಳು ಪಾರದರ್ಶಕವಾಗಿಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಮಸೂದೆಗಳನ್ನು ಲೋಕಸಭೆಯಲ್ಲಿ ಇತ್ತೀಚೆಗೆ ಮಂಡಿಸಿದ್ದರು. ಬ್ರಿಟಿಷ್ ಕಾಲದ ಐ.ಪಿ.ಸಿ., ಸಿ.ಆರ್.ಪಿ.ಸಿ. ಹಾಗೂ ಭಾರತೀಯ ಸಾಕ್ಷ್ಯ ಕಾಯ್ದೆಗಳನ್ನು ಬದಲಿಸಲು ಕೇಂದ್ರ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ.

ಮಸೂದೆಗಳನ್ನು ಸಂಸತ್ ಸಮಿತಿಯ ಪರಿಶೀಲನೆಗೆ ವಹಿಸಲಾಗಿದೆ. ಇವುಗಳನ್ನು ವ್ಯಾಪಕ ಸಾರ್ವಜನಿಕ ಚರ್ಚೆಗೆ ಒಳಪಡಿಸಬೇಕಿದೆ.

ಅಪರಾಧ ಕಾಯ್ದೆಗಳನ್ನು ಚರ್ಚೆ ಇಲ್ಲದೇ, ದಮನಕಾರಿಯಾಗಿ ಜಾರಿಗೆ ತರಬಾರದು ಎಂದು ಸುರ್ಜೇವಾಲಾ ಹೇಳಿದ್ದಾರೆ.

# ಹಡಗಲಿಯಲ್ಲಿ ಸಚಿವ ಜಮೀರ್ ಅವರಿಗೆ ಸ್ವಾಗತ : ಎತ್ತಿನ ಬಂಡಿಯಲ್ಲಿ ಮೆರವಣಿಗೆ



ಹೂವಿನಹಡಗಲಿ, ಆ.13- ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಪ್ರಪ್ರಥಮ ಬಾರಿಗೆ ಹಡಗಲಿ ತಾಲ್ಲೂಕಿಗೆ ಭೇಟಿ ನೀಡಿದ್ದರು. ಪಟ್ಟಣದ ಹೊರವಲಯದಲ್ಲಿ ಸಚಿವರನ್ನು ಸ್ವಾಗತಿಸಿದ ಶಾಸಕ ಕೃಷ್ಣನಾಯ್ಕ ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ ಸನ್ಮಾನಿಸಿದರು.

ನಂತರ ಅಂಬೇಡ್ಕರ್ ಸರ್ಕಲ್ ತಲುಪಿದಾಗ ಪೂರ್ಣ ಕುಂಭ ಹೊತ್ತ ಮಹಿಳೆಯರೊಂದಿಗೆ ಎತ್ತಿನ ಬಂಡಿಯಲ್ಲಿ ಶಾಸಕ ಕೃಷ್ಣನಾಯ್ಕ, ಜಿಲ್ಲಾಧಿ ಕಾರಿ ಎಂ. ಎಸ್. ದಿವಾಕರ್ ಜೊತೆಯಾಗಿ ಮೆರವಣಿಗೆಯಲ್ಲಿ ಸಾಗಿದರು.

ಶಾಸ್ತ್ರಿ ಸರ್ಕಲ್‌ನಲ್ಲಿ ಅಭಿಮಾನಿಗಳು ಜೆಸಿಬಿ ಮೂಲಕ ಸೇಬಿನ ಹಣ್ಣಿನ ಹಾರವನ್ನು ಹಾಕಿ ಹೂ ಮಳೆ ಸುರಿಸಿದರು. ಸಚಿವರು ಪ್ರವಾಸಿ ಮಂದಿರಕ್ಕೆ ತೆರಳಿದ ನಂತರ ಜಾಮಿಯಾ ಮಸೀದಿಗೆ ತೆರಳಿ ಪ್ರಾರ್ಥನೆ ಸಲ್ಲಿಸಿದರು.

# ಮಾಯಕೊಂಡ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ : ಶಾಸಕ ಬಸವಂತಪ್ಪ



ದಾವಣಗೆರೆ, ಆ.13- ಮಾಯಕೊಂಡ ಕ್ಷೇತ್ರ ಅಭಿವೃದ್ಧಿಯಲ್ಲಿ ಹಿಂದುಳಿದಿದ್ದು, ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸುತ್ತೇನೆ. ಇದಕ್ಕೆ ಪ್ರತಿಯೊಬ್ಬರು ಸಹಕಾರ ನೀಡಬೇಕೆಂದು ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಮನವಿ ಮಾಡಿದರು.

ತಾಲ್ಲೂಕಿನ ಮಾಯಕೊಂಡ ಗ್ರಾಮ ಪಂಚಾಯಿತಿಗೆ ನಿನ್ನೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಗ್ರಂಥಾಲಯ ದಿನಾಚರಣೆ ಕಾರ್ಯಕ್ರಮದಲ್ಲಿ ಪೌರ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಮಾಯಕೊಂಡ ಕ್ಷೇತ್ರವನ್ನು ಮೊದಲಿನಿಂದಲೂ ಕಡೆಗಣಿಸಲಾಗಿದೆ. ಇನ್ನು ಮುಂದೆ ಹಾಗೆ ಆಗಲು ಬಿಡುವುದಿಲ್ಲ. ಮಾಯಕೊಂಡ ಕ್ಷೇತ್ರವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಜವಾಬ್ದಾರಿ ನನ್ನದಾಗಿದೆ ಎಂದು ಭರವಸೆ ನೀಡಿದರು.


ಮಾಯಕೊಂಡ ಗ್ರಾಮ ಪಂಚಾಯಿತಿಗೆ ಸುಸಜ್ಜಿತ ಕಟ್ಟಡ ನಿರ್ಮಿಸಬೇಕಾಗಿದೆ. ಗ್ರಾಮ ಪಂಚಾಯಿತಿ ಆಡಳಿತ, ನರೇಗಾ ಅನುದಾನವನ್ನು ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣಕ್ಕೆ ಬಳಸಿರುವುದು ಸರಿಯಾದ ಕ್ರಮವಲ್ಲ. ಸರ್ಕಾರದ ಅನುದಾನದಿಂದ ಮಾತ್ರ ಅಭಿವೃದ್ಧಿ ಮಾಡಬೇಕೆಂದು ಸಲಹೆ ನೀಡಿದರು.

ಗ್ರಾಪಂ ಅಧ್ಯಕ್ಷೆ ಶಿವಮ್ಮ ಮಲ್ಲಿಕಾರ್ಜುನ, ಉಪಾಧ್ಯಕ್ಷ ಮಂಜುನಾಥ್, ಉಪ ತಹಶೀಲ್ದಾರ್ ಹಾಲೇಶಪ್ಪ, ಗ್ರಾಪಂ ಪಿಡಿಒ ನಾಗರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ರಾಜೇಂದ್ರಣ್ಣ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ವೆಂಕಟೇಶ್, ಗೋಪಾಲಪ್ಪ, ಮೆಡಿಕಲ್ ರುದ್ರೇಶಣ್ಣ, ಬೀರಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

### ನಾಳೆ ಸ್ವಾತಂತ್ರೋತ್ಸವ

ದಾವಣಗೆರೆ, ಆ.13- ದಾವಣಗೆರೆ ಪಬ್ಲಿಕ್ ಶಾಲೆಯ ವತಿಯಿಂದ ಮಾರ್ಕೆಟ್ ಅಸೋಸಿಯೇಷನ್ ಸಹಕಾರದೊಂದಿಗೆ ನಾಡಿದ್ದು ದಿನಾಂಕ 15 ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಕೆ.ಆರ್. ಮಾರ್ಕೆಟ್‌ನಲ್ಲಿ ಆಚರಿಸಲಾಗುವುದು.

### ಗುರುಶಾಂತಪ್ಪ .ಎಸ್ ನಿಧನ



ದಾವಣಗೆರೆ ನಿಟ್ಟುವಳ್ಳಿ ವಾಸಿ ನಿವೃತ್ತ ಪೊಲೀಸ್ ಇಲಾಖೆ ಗುರುಶಾಂತಪ್ಪ ಎಸ್. (69) ಇವರು, ದಿನಾಂಕ 13.8.2023ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಚಿರನಿದ್ರೆ ಹೊಂದಿದ್ದಾರೆ. ಪತ್ನಿ, ಸಹೋದರರು, ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಹಳೇಬಾತಿ ಗುಡ್ಡದ ಕ್ಯಾಂಪ್‌ನಲ್ಲಿ ಇಡಲಾಗಿದೆ. ದಿನಾಂಕ 14.08.2023ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಹಳೇಬಾತಿ ಕ್ರೈಸ್ತ ಸಮಾಜದವರ ಸಮಾಧಿ ಜಾಗದಲ್ಲಿ ನೆರವೇರಿಸಲಾಗುವುದು.

# ಆಸ್ತಿಕ ಭಕ್ತರಿಗೆ ವೀರಭದ್ರೇಶ್ವರ ದೇವರ ದರ್ಶನ ಭಾಗ್ಯ ದೊರೆಯುವಂತಾಗಲಿ : ಹೊನ್ನಾಳಿ ಶ್ರೀಗಳು



ಹೊನ್ನಾಳಿ, ಆ.13- ಪಟ್ಟಣದ ಹೃದಯ ಭಾಗದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ವೀರಭದ್ರೇಶ್ವರ ದೇವಸ್ಥಾನದ ಕಟ್ಟಡವನ್ನು ಹೊನ್ನಾಳಿ ಹಿರೇಕಲ್ಮಠದ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಗಳು ದೇವಸ್ಥಾನ ಸಮಿತಿಯವರು ಸುಂದರವಾದ ಶಿಲೆಯ ಕಲ್ಲಿನಿಂದ ಪೇಟೆವೀರಭದ್ರೇಶ್ವರ ಸ್ವಾಮಿಯ ದೇವಸ್ಥಾನವು ಅತ್ಯಂತ ಶೀಘ್ರವಾಗಿ ನಡೆಯುತ್ತಿದ್ದು, ದೇವಸ್ಥಾನ ಕಟ್ಟುವ ಕಾರ್ಯವು ಪೂರ್ಣಗೊಳ್ಳುತ್ತಿದ್ದು, ಇಲ್ಲಿನ ಭಕ್ತರ ಸಹಕಾರದಿಂದ ದೇವರ ದರ್ಶನ ಭಾಗ್ಯ ದೊರೆಯಲೆಂದರು. ಇಲ್ಲಿನ ಆಸ್ತಿಕ ಸದ್ಭಕ್ತರಿಗೆ ಸಂತೋಷ, ಶಾಂತ, ನೆಮ್ಮದಿಗೆ ಕಾರಣವಾಗಲಿದೆ. ಶಿಲಾ ಕಟ್ಟಡವು ಸುಂದರವಾಗಿ ನಿರ್ಮಾಣವಾಗು ತ್ತಿದ್ದು ಬರುವ ಕಾರ್ತೀಕ ಮಾಸದಲ್ಲಿ ಉದ್ಘಾಟನೆಗೆ ಸಿದ್ದವಾಗಲಿದೆ ಎಂದರು.

ಪಟ್ಟಣಶೆಟ್ಟಿ ಪರಮೇಶ್ ಮಾತನಾಡಿ, ತುಮಕೂರು-ಶಿರಾ ಕಡೆಯ ಕಲ್ಲನ್ನು ತೆರವುಗೊಳಿಸಲಾಗಿದ್ದು, ಕಾರ್ಕಳ ಶಿಲ್ಪಿಯವರಿಂದ ಸುಂದರವಾಗಿ ನಿರ್ಮಾಣವಾಗು ತ್ತಿದ್ದು, ಸುಮಾರು 1 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕಟ್ಟಡವು ನಿರ್ಮಾಣವಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ದೇವಸ್ತಾನ ಸಮಿತಿಯ ಪದಾಧಿಕಾರಿಗಳು, ಸಮಾಜದ ಮುಖಂಡರಾದ ಕುಂಬಾರ ಮುರುಗೇಂದ್ರಣ್ಣ, ಸತೀಶ್, ರುದ್ರಣ್ಣ, ಪಟ್ಟಣಶೆಟ್ಟಿ ವಿಜಯ್, ಕುಂಬಾರ ಬಸಣ್ಣ, ಹೆಚ್.ಆರ್. ಸತೀಶ್ ಇನ್ನಿತರರಿದ್ದರು.

# ಉದ್ಯೋಗ ಪೂರಕ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು

## ರಾಣೇಬೆನ್ನೂರಿನಲ್ಲಿ ವಿದ್ಯಾರ್ಥಿಗಳಿಗೆ ನಿವೃತ್ತ ಪ್ರಾಧ್ಯಾಪಕ ಡಾ.ಅಶೋಕ ಕುರ್ಲಿ ಕರೆ



ರಾಣೇಬೆನ್ನೂರು, ಆ.13- ವಿದ್ಯಾರ್ಥಿಗಳು ಅಧ್ಯಯನದ ಜೊತೆಗೆ ಉದ್ಯೋಗಕ್ಕೆ ಪೂರಕವಾದ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ನಿವೃತ್ತ ಪ್ರಾಧ್ಯಾಪಕ ಡಾ.ಅಶೋಕ ಕುರ್ಲಿ ಹೇಳಿದರು.

ತಾಲ್ಲೂಕಿನ ಸುಣಕಲ್ಲಬಿದರಿ ಶ್ರೀ ಅರಳಿ ಶಿದ್ಲಿಂಗಪ್ಪ ಬಸಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಶನಿವಾರ ಪ್ರಸಕ್ತ ಶೈಕ್ಷಣಿಕ ಸಾಲಿನ ಪಠ್ಯೇತರ ಚಟುವಟಿಕೆಗಳ ಸಮಾರೋಪ, ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಗ್ರಂಥಪಾಲಕರ ದಿನಾಚರಣೆಯ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳುವುದು ಬಹುದೊಡ್ಡ ಸವಾಲಿನ ಕೆಲಸ. ಹೀಗಾಗಿ ಪದವಿ ಹಂತದಲ್ಲಿಯೇ ಉದ್ಯೋಗ ಅಗತ್ಯವಿರುವ ಪುಸ್ತಕಗಳನ್ನು ಓದುವ ಜೊತೆಗೆ ಸ್ಪೋಕನ್ ಇಂಗ್ಲಿಷ್ ಸೇರಿದಂತೆ ಇನ್ನಿತರೆ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ಆರ್.ಎಫ್. ಅಯ್ಯನಗೌಡ್ರ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಉಪನ್ಯಾಸಕ ಬಿ.ಕೆ. ಕೊಟ್ಟದ, ಸಾಂಸ್ಕೃತಿಕ ವಿಭಾಗದ ಸಂಚಾಲಕ ಡಾ. ಎನ್.ಬಿ. ಹನುಮಂತರಾಜು, ಡಾ.ಎಸ್.ಐ.ಮಲ್ಲಿಗಾರ, ದೈಹಿಕ ಶಿಕ್ಷಣ ನಿರ್ದೇಶಕ ಸೋಮಶೇಖರ ಮಡಿವಾಳರ, ಕೆ.ಜೆ.ಆರ್.ಲೋಹಿಯಾ, ಮಂಜುನಾಥ ಎನ್.ಜಿ., ಯಮುನ ನಾಯ್ಕ, ಸಂತೋಷಕುಮಾರ್, ಭಾಗ್ಯ ದೇವಗಿರಿಮಠ, ಪಿ.ಕೆ.ಬಿನ್ನಾಳ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ 12.08.2023ರ ಶನಿವಾರ ನಿಧನರಾದ ಶ್ರೀ ರಾಮಾಂಜನೇಯ ವಿದ್ಯಾಸಂಸ್ಥೆ (ರಿ) ಶಾಮನೂರು ಇದರ ಉಪಾಧ್ಯಕ್ಷರಾದ

**ಶ್ರೀ ಕುಂದುವಾಡ ಹನುಮಂತಪ್ಪ**

ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಶಾಂತಿ ಕೋರಿ, ಮೃತರ ಕುಟುಂಬ ವರ್ಗದವರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

**ಶ್ರೀ ರಾಮಾಂಜನೇಯ ವಿದ್ಯಾಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಖಜಾಂಚಿಗಳು, ಹಾಗೂ ಎಲ್ಲಾ ನಿರ್ದೇಶಕರುಗಳು. ಶ್ರೀ ಚಿಕ್ಕನಹಳ್ಳಿ ದೊಡ್ಡಪ್ಪ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಹಾಗು ಸಿಬ್ಬಂದಿ ವರ್ಗ.**

## ಎಸ್. ಚಂದ್ರಶೇಖರಪ್ಪ ನಿಧನ



ದಾವಣಗೆರೆ ವಿದ್ಯಾನಗರ ಕೆನರಾ ಬ್ಯಾಂಕ್ ಹತ್ತಿರ, ಒಂದನೇ ಕ್ರಾಸ್ ಶ್ರೀ ಗುರು ಕೃಪಾದ ವಾಸಿ

**ಎಸ್. ಚಂದ್ರಶೇಖರಪ್ಪ**

ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು ದಾವಣಗೆರೆ ಇವರು ದಿನಾಂಕ 13.08.2023ರ ಭಾನುವಾರ ರಾತ್ರಿ 9.06ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಶ್ರೀಯುತರು ಅಂತ್ಯಕ್ರಿಯೆಯನ್ನು ದಿನಾಂಕ 14.08.2023ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ನಗರದ ವೀರಶೈವ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಡಾ. ಎಸ್.ಸಿ. ಚಿದಾನಂದ, ಎಸ್.ಸಿ. ನಾಗರಾಜ್ ಮತ್ತು ಶ್ರೀಮತಿ ಸಹನ ಶ್ರೀ ರಾಜೀವ್


ಆಗ್ರೋ ಸೀಡ್ಸ್ ಕಾರ್ಪೊರೇಷನ್, ದಾವಣಗೆರೆ

ಮೊ : +91 98454 72073

# 22 ದಿನಗಳ ನಂತರ ಚೀತಾ ವಶಕ್ಕೆ

ಶಿಯೋಪುರ್, ಆ. 13 - ಮಧ್ಯ ಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಿಂದ ಕಣ್ಮರೆಯಾಗಿದ್ದ ದಕ್ಷಿಣ ಆಫ್ರಿಕಾ ಮೂಲದ ಚೀತಾ, 22 ದಿನಗಳ ನಂತರ ವಶಕ್ಕೆ ಸಿಕ್ಕಿದೆ. ನಿರ್ವ ಎಂಬ ಹೆಸರಿನ ಚೀತಾ ಜುಲೈ 21ರಿಂದ ಕಾಣೆಯಾಗಿತ್ತು. ಅದನ್ನು ಕುನೊ ಉದ್ಯಾನದ ಧೊರೆತ್ ವಲಯದಲ್ಲಿ ಹಿಡಿಯಲಾಗಿದೆ. ಚೀತಾದ ರೇಡಿಯೋ ಕಾಲರ್ ಜುಲೈ 21ರಿಂದ ಕೆಲಸ ಮಾಡುತ್ತಿರಲಿಲ್ಲ. ನಂತರ ಅದರ ಶೋಧಕ್ಕೆ ತೀವ್ರ ಕ್ರಮ ತೆಗೆದುಕೊಳ್ಳಲಾಗಿತ್ತು. ಆಗಸ್ಟ್ 12ರಂದು ಉಪಗ್ರಹದ ಮೂಲಕ ಚೀತಾ ಇರುವ ಸ್ಥಳದ ಮಾಹಿತಿ ದೊರೆತಿತ್ತು. ತಕ್ಷಣವೇ ಶೋಧ ತಂಡ ಅಲ್ಲಿಗೆ ತೆರಳಿ ಚೀತಾ ಹಿಡಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಚಿಕ್ಕತೊಗಲೇರಿ ಸಿ.ಜಿ. ಶೇಖರಪ್ಪ ನಿಧನ



ದಾವಣಗೆರೆ ತಾಲ್ಲೂಕು ಚಿಕ್ಕತೊಗಲೇರಿ ಗ್ರಾಮದ ವಾಸಿಯಾದ

**ಸಿ.ಜಿ. ಶೇಖರಪ್ಪ**

ಇವರು ದಿನಾಂಕ 13.08.2023ರ ಭಾನುವಾರ ಸಂಜೆ 6.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು.

ಪತ್ನಿ, ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.08.2023ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಚಿಕ್ಕತೊಗಲೇರಿ ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು.

ಕಲ್ಲಬಸಜ್ಜರ ಹಾಗು ಗೌದ್ರ ವಂಶಸ್ಥರು, ಚಿಕ್ಕತೊಗಲೇರಿ

ಮೊ : 96322 58781

# ಹಿರಿಯ ಪತ್ರಕರ್ತ ದಿ. ಜೆ.ಬಿ. ಶಿವಲಿಂಗಪ್ಪ ಅವರ ಪುತ್ರ ಜೆ.ಎಸ್.ಪ್ರಶಾಂತ್ ನಿಧನ



ದಾವಣಗೆರೆ,ಆ.13- ನಗರದ ಹಿರಿಯ ಪತ್ರಿಕೋದ್ಯಮಿ ಮತ್ತು ದಾವಣಗೆರೆ ಟೈಮ್ಸ್ ಸಂಸ್ಥಾಪಕ ಸಂಪಾದಕರಾಗಿದ್ದ ದಿ. ಜೆ.ಬಿ.ಶಿವಲಿಂಗಪ್ಪ ಅವರ ದ್ವಿತೀಯ ಪುತ್ರ ಜೆ.ಎಸ್.ಪ್ರಶಾಂತ್ ಇಂದು ನಿಧನರಾದರು.

ಪ್ರಶಾಂತ್, ಇಂದಿನ ಸುದ್ದಿ ಸಂಪಾದಕರಾದ ವೀರಪ್ಪ ಎಂ. ಭಾವಿ ಅವರ ಅಳಿಯ. ಮೃತರಿಗೆ ಸುಮಾರು 42 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸಹೋದರ - ದಾವಣಗೆರೆ ಟೈಮ್ಸ್ ಸಂಪಾದಕ ಜೆ.ಎಸ್.ವೀರೇಶ್, ಇಬ್ಬರು ಸಹೋದರಿಯರನ್ನು ಅಗಲಿದ್ದಾರೆ.

ಬಸವರಾಜಪೇಟೆಯಲ್ಲಿ ವಾಸವಾಗಿದ್ದ ಪ್ರಶಾಂತ್ ಅವರ ಪಾರ್ಥಿವ ಶರೀರವನ್ನು ಕೊಂಡಜ್ಜಿ ರಸ್ತೆಯ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನ ಎದುರಿರುವ ಸಹೋದರ ಜೆ.ಎಸ್. ವೀರೇಶ್ ಅವರ ನಿವಾಸದಲ್ಲಿದಲ್ಲಿರಿಸಲಾಗಿದೆ. ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 14ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನಡೆಯಲಿದೆ.

# ಹರಿಹರ : ಕುರುಬ ಸಮಾಜದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮಲೇಬೆನ್ನೂರು, ಆ. 13- ಹರಿಹರ ತಾಲ್ಲೂಕು ಕುರುಬ ಸಮಾಜದ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿಯಲ್ಲಿ ಶೇ. 85 ಕ್ಕಿಂತ ಹೆಚ್ಚು ಮತ್ತು ಪಿಯುಸಿಯಲ್ಲಿ ಶೇ. 80 ಕ್ಕಿಂತ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಬರುವ ಸೆಪ್ಟೆಂಬರ್ 10 ರಂದು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಬೆಳ್ಳೂಡಿ ಶಾಖಾ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಪ್ರತಿಭಾ ಪುರಸ್ಕಾರಕ್ಕೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಇದೇ ದಿನಾಂಕ 25 ರೊಳಗೆ ಅಗತ್ಯ ದಾಖಲೆಗಳನ್ನು ಹರಿಹರ ನಗರದ ಕಾಳಿದಾಸ ಶಾಲೆಗೆ ಸಲ್ಲಿಸಲು ಹರಿಹರ ತಾ. ಕನಕ ನೌಕರರ ಸಂಘ ಮನವಿ ಮಾಡಿದೆ. ಮಾಹಿತಿಗಾಗಿ 78292 71286, 89719 62969, 63626 68178, 99019 09658 ಸಂಪರ್ಕಿಸಬಹುದು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಪರಿಸರ ಸ್ವಚ್ಛತೆ ಜನಜಾಗೃತಿ ಆಂದೋಲನವಾಗಬೇಕು



## ಜಗಳೂರು ಶಾಸಕ ದೇವೇಂದ್ರಪ್ಪ ಅಭಿಮತ

ಜಗಳೂರು, ಆ.13- ಪರಿಸರ ಸ್ವಚ್ಛತೆಯ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಕೇವಲ ಸರ್ಕಾರಿ ಕಾರ್ಯಕ್ರಮವಾಗದೆ, ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸುವ ಮೂಲಕ ಜನಜಾಗೃತಿ ಆಂದೋಲನವಾಗಬೇಕು ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಬಯಲು ರಂಗಮಂದಿರದ ಆವರಣದಲ್ಲಿ ಪಟ್ಟಣ ಪಂಚಾಯಿತಿ ವತಿಯಿಂದ ಹಮ್ಮಿಕೊಂಡಿದ್ದ 'ಸ್ವಚ್ಛ ಸರ್ವೇಕ್ಷಣಾ ಅಭಿಯಾನಕ್ಕೆ' ಚಾಲನೆ ನೀಡಿ ಅವರು ಮಾತನಾಡಿದರು.

ಮನುಷ್ಯನ ಆರೋಗ್ಯ ರಕ್ಷಣೆಗೆ ಪರಿಸರ ಸ್ವಚ್ಛತೆ ಅತ್ಯವಶ್ಯಕ. ವೃಕ್ಷ ರಕ್ಷಿತೋ ರಕ್ಷಿತಃ. ಪರಿಸರವನ್ನು ನಾವು ರಕ್ಷಿಸಿದರೆ, ಪರಿಸರ ನಮ್ಮನ್ನು ರಕ್ಷಿಸುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಸ್ತುತವಾಗಿ ಪ್ರತಿಯೊಬ್ಬರೂ ಪ್ರಕೃತಿ ಆರಾಧಕರಾಗಬೇಕಿದೆ. ಸನಾತನ ಶಿಲಾಯುಗದಲ್ಲಿ ಪ್ರಕೃತಿ ಆರಾಧಕರಾಗಿದ್ದುಕೊಂಡು ಉತ್ತಮ ಆರೋಗ್ಯ, ಸಂಪತ್ತು ಗಳಿಸಿ ಶತಾಯುಷಿಗಳಾಗಿದ್ದರು. ಆದರೆ ಇಂದು ದೇಶದಲ್ಲಿ ಜನಸಂಖ್ಯೆ ಹೆಚ್ಚಳ ದಿನದಿಂದ ಪ್ರಕೃತಿ ಸಂಪತ್ತು ವಿನಾಶದತ್ತ ಸಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಕೋವಿಡ್ ಸಂದರ್ಭದಲ್ಲಿ ಆಮ್ಲಜನಕದ ಮಹತ್ವ ಅರಿತುಕೊಂಡಿದ್ದನ್ನು ದೇಶದ ಜನತೆ ಮರೆಯಬಾರದು ಎಂದರು.

ಪ.ಪಂ ಮುಖ್ಯಾಧಿಕಾರಿ ಲೋಕ್ಯಾನಾಯ್ಕ ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಪಟ್ಟಣ ಪಂಚಾಯಿತಿ ವ್ಯಾಪ್ತಿ ಸ್ವಚ್ಛತೆಯ ಕಾರ್ಯವೈಖರಿಯ ಪರಿಮಿತಿಯ ಮಾಹಿತಿಗಾಗಿ ದೇಶದಲ್ಲಿ ಆ್ಯಪ್ ಮುಖಾಂತರ ಸ್ಥಳೀಯ ಸ್ವಚ್ಛತೆಯ ಮಾಹಿತಿ ಅಪ್‌ಲೋಡ್‌ಗೆ ಕೆಲ ಪ್ರಶ್ನಾವಳಿ ನೀಡಿದ್ದು, ಸಾರ್ವಜನಿಕರು ಮಾಹಿತಿ ಅಪ್ ಲೋಡ್ ಮಾಡಬೇಕು, ಇಲಾಖೆಯ ಜವಾಬ್ದಾರಿ ಹೆಚ್ಚಿಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಪ.ಪಂ ಸದಸ್ಯರಾದ ರವಿಕುಮಾರ್, ರಮೇಶ್ ರೆಡ್ಡಿ, ರವಿಕುಮಾರ್, ಮಂಜಣ್ಣ, ಶಕೀಲ್ ಅಹಮ್ಮದ್, ಪ್ರಭಾರಿ ಬಿಇಓ ಸುರೇಶ್ ರೆಡ್ಡಿ, ಎನ್‌ಎಂಕೆ ಶಾಲೆಯ ಲೋಕೇಶ್, ಆರೋಗ್ಯ ಇಲಾಖೆ ನಿರೀಕ್ಷಕ ಖಿಫಾಯತ್, ಕಂದಾಯ ನಿರೀಕ್ಷಕ ಮೊದೀನ್, ಮುಖಂಡರಾದ ಮಹಮ್ಮದ್ ಗೌಸ್, ಪಲ್ಲಾಗಟ್ಟೆ ಶೇಖರಪ್ಪ ಮತ್ತಿತರರು ಇದ್ದರು.

# ಕಲೆ, ಸಾಹಿತ್ಯ, ರಂಗ ಚಟುವಟಿಕೆ ಗ್ರಾಮೀಣ ಭಾಗದಲ್ಲಿ ಇನ್ನೂ ಜೀವಂತ



## ಹರಪನಹಳ್ಳಿ : ನಾಟಕ ಪ್ರದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ಕೆ.ಮಲ್ಲಪ್ಪ

ಹರಪನಹಳ್ಳಿ, ಆ. 13- ಕಲೆ, ಸಾಹಿತ್ಯ ಹಾಗೂ ರಂಗಭೂಮಿ ಚಟುವಟಿಕೆಗಳು ಇಂದು ಉಳಿದಿವೆಯಾದರೂ ಅದು ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಎಂದು ವಲಯ ಅರಣ್ಯಾಧಿಕಾರಿ ಕೆ.ಮಲ್ಲಪ್ಪ ತಿಳಿಸಿದರು.

ತಾಲೂಕಿನ ಬಾಗಳಿ ಗ್ರಾಮದ ಶಂಕ್ರಮ್ಮ ದಿ.ಬಿ. ಕೆಂಚಪ್ಪ ಸಮುದಾಯ ಭವನದಲ್ಲಿ ಕತ್ತಲೆ ಬೆಳಕು ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಸೋಬಾನೆ ಪದ, ರಂಗಗೀತೆ ಮತ್ತು ನಾಟಕ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹಳ್ಳಿಗಳಲ್ಲಿ ಯಾವುದೇ ಹಬ್ಬಗಳು ಬಂದರೆ ಅತ್ಯಂತ ಸಡಗರದಿಂದ ನಾಟಕ ಪ್ರದರ್ಶನಗಳು ಸ್ಪರ್ಧೆಯಲ್ಲಿ ನಡೆಯುತ್ತಿದ್ದವು, ಆದರೆ ಮೊಬೈಲ್ ಹಾವಳಿಯಿಂದ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿದೆ ಎಂದರು.

ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಣಕಾರ ರಾಜಶೇಖರ್ ಮಾತನಾಡಿ, ಬಾಗಳಿ ಗ್ರಾಮದಲ್ಲೂ ಸಹ ಅನೇಕ ವರ್ಷಗಳಿಂದ ಐತಿಹಾಸಿಕ ಪ್ರಧಾನ ಗೋಣಿ ಬಸವೇಶ್ವರ ನಾಟಕ ಪ್ರದರ್ಶನ ನಡೆಯುತ್ತಿದೆ. ಇದರಲ್ಲಿ ಅನೇಕ ಕಲಾವಿದರು ಕೆಲಸ ನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ತಾಲ್ಲೂಕಿನಲ್ಲಿ ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಕಲಾತ್ಮಕವಾಗಿ ಗುರುತಿಸಿಕೊಂಡಿದ್ದು, ಜಾನಪದ, ಸೋಬಾನೆ, ವೇಷಗಾರರು, ನಾಟಕ, ಸೇರಿದಂತೆ ಅನೇಕ ಸಾಂಸ್ಕೃತಿಕ ಚಟುವಟಿಕೆಗಳು ಜರುಗುತ್ತಿದ್ದು, ಇನ್ನಷ್ಟು ಇಮ್ಮಡಿಯಾಗಬೇಕಿದೆ ಎಂದು ಹೇಳಿದರು.

ಬಂಡಿ ಚೌಡಮ್ಮದೇವಿ ಸೋಬಾನೆ ಕಲಾವಿದರ ಸಂಘದ ಸಿ.ರಂಗಮ್ಮನವರ ತಂಡದಿಂದ ಸೋಬಾನ ಪದ ಗಾಯನ, ಬಣಕಾರ ರೇವಣ್ಣ ಮತ್ತು ಶಿವಯೋಗಿ ಇವರಿಂದ ರಂಗಗೀತೆ ಗಾಯನ ನಡೆಯಿತು.

ಚಂದ್ರಶೇಖರ ಕಂಬಾರ ರಚನೆಯ 'ಬೆಪ್ಪತಕ್ಕಡಿ ಬೋಳೆಶಂಕರ' ನಾಟಕ ಮರಿಯಮ್ಮನಹಳ್ಳಿ ಮಲ್ಲೇಶ ಮಾಲ್ವಿ ಮೈದುರು ಇವರ ತಂಡದಿಂದ ಪ್ರದರ್ಶನಗೊಂಡಿತು.

ಗ್ರಾ.ಪಂ. ಅಧ್ಯಕ್ಷೆ ಉತ್ತಂಗಿ ರೇಣುಕ ನಾಗರಾಜ, ಟ್ರಸ್ಟ್ ಅಧ್ಯಕ್ಷ ಅರುಣ್ ಕುಮಾರ ಮೇದಾರ, ಟಿ.ಶ್ಯಾಮಲ, ಪಿ.ಕರಿಬಸಪ್ಪ, ಕನಕೇಶ್ವರ ಕಲಾ ಸಂಘದ ಅಧ್ಯಕ್ಷ ವಿ.ಬಿ.ವಿರೇಶ್, ಬಣಕಾರ ಮಂಜುನಾಥ, ಮುದ್ದಜ್ಜಿ ಚಿನ್ನಜ್ಜ, ಸಿ.ರಂಗಮ್ಮ, ಹನುಮನಗೌಡ, ಮಡಿವಾಳಜ್ಜ ಸೇರಿದಂತೆ ಇತರರು ಇದ್ದರು.

# ಕಂಪ್ಯೂಟರೀಕರಣವಾಗಿ, ರೈತರಿಗೆ ತ್ವರಿತ ಸಾಲ ಕೊಡಿ








(1ನೇ ಪುಟದಿಂದ) ಎಂದರು.

ಉತ್ತರ ಕರ್ನಾಟಕದ ಬ್ಯಾಂಕುಗಳು 4-5 ಸಾವಿರ ಕೋಟಿ ರೂ. ಸಾಲ ಕೊಡುತ್ತಿವೆ. 400ರಿಂದ 500 ಕೋಟಿ ರೂ. ಲಾಭ ಗಳಿಸುತ್ತಿವೆ. ದಾವಣಗೆರೆ ಜಿಲ್ಲಾ ಸಹಕಾರಿ ಬ್ಯಾಂಕ್ 1,100 ಕೋಟಿ ರೂ.ಗಳ ಸಾಲ ಕೊಟ್ಟಿದೆ ಎಂದವರು ಹೇಳಿದರು.

ಡಿ.ಸಿ.ಸಿ. ಬ್ಯಾಂಕ್ ಕಂಪ್ಯೂಟರೀಕರಣ ಇನ್ನೂ ಆಗಿಲ್ಲ. ಈ ಕೆಲಸ ತ್ವರಿತ ಆಗಬೇಕಿದೆ. ನಬಾರ್ಡ್ ಹಾಗೂ ಅಪೆಕ್ಸ್ ಬ್ಯಾಂಕುಗಳ ಜೊತೆ ಮಾತನಾಡಿದರೆ ಸಾಕಷ್ಟು ಹಣ ಸಿಗುತ್ತದೆ. ಈ ಹಣ ಪಡೆದು ರೈತರಿಗೆ ಸಾಲವಾಗಿ ನೀಡಬೇಕು ಎಂದರು.

ಸಹಕಾರಿ ವಲಯದ ಮುಖಂಡರ ವರ್ತನೆ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಯಾವ ಪಕ್ಷ ಅಧಿಕಾರದಲ್ಲಿರುತ್ತದೋ ಅತ್ತ ಕಡೆ ಹೋಗುತ್ತಿದ್ದೀರಿ. ಯಾವ ಪಕ್ಷದ ಕಡೆಯೂ ಗುರುತಿಸಿಕೊಳ್ಳದೇ ಸಹಕಾರಿ ಪಕ್ಷವಾಗಿದ್ದು ಕೆಲಸ ಮಾಡಬೇಕು ಎಂದರು.

ಜಿಲ್ಲಾ ಸಹಕಾರ ಒಕ್ಕೂಟಕ್ಕೆ ನಿವೇಶನ ಬೇಕೆಂಬ ಮನವಿ ಸಲ್ಲಿಸಿರುವ ಬಗ್ಗೆ ಪ್ರಸ್ತಾಪಿಸಿದ ಸಚಿವರು, ಈ ಹಿಂದೆಯೇ ನಿವೇಶನ ಕೊಡಲಾಗಿತ್ತು. ಆದರೆ, ನಿಮ್ಮಲ್ಲಿನ ಸಂಘರ್ಷದಿಂದ ಪ್ರಸ್ತಾವನೆ ಅಲ್ಲೇ ನಿಂತಿತು. ಆ ರೀತಿ ಆಗಬಾರದು ಎಂದು ಕಿವಿಮಾತು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕ ಜೆ.ಆರ್. ಷಣ್ಮುಖಪ್ಪ ಮಾತನಾಡಿ, ಪತ್ತಿನ ಸಹಕಾರ ಸಂಘಗಳಿಗೆ ನಿವೇಶನ ಹಾಗೂ ಸುಸಜ್ಜಿತ ಕಟ್ಟಡ ಕಲ್ಪಿಸಬೇಕು. ಸಾಲ ಮನ್ನಾದ ಬಾಕಿ ಉಳಿದಿರುವ 8.57 ಕೋಟಿ ರೂ.ಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಬೇಕು ಎಂದು ಮನವಿ ಸಲ್ಲಿಸಿದರು.

ವೇದಿಕೆಯ ಮೇಲೆ ಶಾಸಕರಾದ ಶಾಮನೂರು ಶಿವಶಂಕರಪ್ಪ, ಡಿ.ಜಿ. ಶಾಂತನಗೌಡ, ಬಿ.ಪಿ. ಹರೀಶ್, ಬಸವರಾಜ ವಿ. ಶಿವಗಂಗಾ, ಬಿ. ದೇವೇಂದ್ರಪ್ಪ, ಕೆ.ಎಸ್. ಬಸವಂತಪ್ಪ, ಮಾಜಿ ಶಾಸಕ ಎಸ್. ರಾಮಪ್ಪ, ಹಿರಿಯ ಸಹಕಾರಿ ಎನ್.ಜಿ. ಪುಟ್ಟಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಅವಧಿಯಲ್ಲಿ ಕೆಲಸ ಮಾಡದೇ ಬಿಲ್ ಪಡೆಯಲಾಗಿದೆ. ಈ ರೀತಿಯ ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕು. ಶಿಕ್ಷೆ ನೀಡಿದಾಗ, ಮುಂದೆ ತಪ್ಪಾಗದಂತೆ ತಡೆಯಬಹುದು.

**- ಶಾಸಕ ಶಾಮನೂರು ಶಿವಶಂಕರಪ್ಪ**

ಸಹಕಾರಿ ಸಂಘಗಳ ಆಡಳಿತ ಮಂಡಳಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಪ್ರತ್ಯೇಕವಾಗಿ ಎರಡು ಸೀಟು ನೀಡಬೇಕು. ಪರಿಶಿಷ್ಟರಿಗೆ ಸಮರ್ಪಕವಾಗಿ ಸಾಲ ಸೌಲಭ್ಯ ಸಿಗುವಂತಾಗಬೇಕು.

**- ಶಾಸಕ ಕೆ.ಎಸ್. ಬಸವಂತಪ್ಪ**

ರೈತರ ಬದುಕು ಸಹಕಾರದಿಂದ ಹಸನಾಗಲು ಸಾಧ್ಯ. ಸಹಕಾರಿ ವಲಯ ಸಂಘಟಿತವಾಗಿ ಸರ್ಕಾರದಿಂದ ಅಗತ್ಯ ಸೌಲಭ್ಯಗಳನ್ನು ಪಡೆಯುವ ಜೊತೆಗೆ, ರೈತರಿಗೂ ನೆರವು ತಲುಪಿಸಬೇಕು.

**- ಶಾಸಕ ಬಿ. ದೇವೇಂದ್ರಪ್ಪ**

ದಾವಣಗೆರೆಯಲ್ಲಿ ಪ್ರತ್ಯೇಕ ಹಾಲಿನ ಒಕ್ಕೂಟ ರೂಪುಗೊಳ್ಳಬೇಕಿದೆ. ಹಾಲಿನ ಪ್ರೋತ್ಸಾಹ ಧನವನ್ನು 10 ರೂ.ಗಳಿಗೆ ಹೆಚ್ಚಿಸಬೇಕು. 13 ಸಾವಿರ ರೈತರಿಗೆ ಸಾಲ ಮನ್ನಾ ಲಾಭ ಇನ್ನೂ ತಲುಪಿಲ್ಲ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

**- ಶಾಸಕ ಡಿ.ಜಿ. ಶಾಂತನಗೌಡ**

ಸಹಕಾರಿ ಸೊಸೈಟಿ ಹಾಗೂ ಬ್ಯಾಂಕುಗಳು ಲೆಕ್ಕದಲ್ಲಿ ಶಿಸ್ತು ಹೊಂದಿದಾಗ ಹಾಗೂ ಸಾಲ ಪಡೆದವರು ಸಮಯಕ್ಕೆ ಸರಿಯಾಗಿ ಮರು ಪಾವತಿ ಮಾಡಿದಾಗ ಪ್ರಗತಿ ಸಾಧ್ಯ. ಮಹಾರಾಷ್ಟ್ರ ಹಾಗೂ ಗುಜರಾತ್‌ಗಳನ್ನು ಹಿಂದಿಕ್ಕಿ ಕರ್ನಾಟಕದ ಸಹಕಾರ ವಲಯವು ಪ್ರಗತಿ ಕಾಣಬೇಕು.

**- ಶಾಸಕ ಬಿ.ಪಿ. ಹರೀಶ್**

ರೈತರಿಗೆ ಸಹಕಾರಿ ವಲಯವೇ ಬೆನ್ನೆಲುಬಾಗಿದೆ. ರೈತರಿಗೆ ಐದು ಲಕ್ಷ ರೂ.ಗಳವರೆಗೆ ಬಡ್ಡಿ ರಹಿತ ಸಾಲದ ಯೋಜನೆ ಸರ್ಕಾರ ಪ್ರಕಟಿಸಿದ್ದು, ಇದನ್ನು ರೈತರಿಗೆ ತಲುಪಿಸಬೇಕು. ಸಮಯಕ್ಕೆ ಸರಿಯಾಗಿ ಸಾಲ ನವೀಕರಿಸಬೇಕು.

**- ಶಾಸಕ ಬಸವರಾಜ್ ಶಿವಗಂಗಾ**

### ಹಾಲು ಒಕ್ಕೂಟ, ಹಸು ಸಬ್ಸಿಡಿ

ಆರು ವರ್ಷಗಳ ಹಿಂದೆಯೇ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳನ್ನು ಸೇರಿಸಿ ಪ್ರತ್ಯೇಕ ಹಾಲಿನ ಒಕ್ಕೂಟ ಸ್ಥಾಪಿಸಲು ಮುಂದಾಗಿದ್ದೆ. ಆದರೆ, ಅದಕ್ಕೂ ಅಡ್ಡಿಪಡಿಸಿದರು. ಸರ್ಕಾರ ಬದಲಾದ ನಂತರ ಇಲ್ಲಿಯವರೆಗೂ ಯೋಜನೆಯಲ್ಲಿ ಪ್ರಗತಿಯಾಗಿಲ್ಲ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಬೇಸರ ವ್ಯಕ್ತಪಡಿಸಿದರು.

ಈಗ ಹಾಲಿನ ಒಕ್ಕೂಟ ಸ್ಥಾಪನೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಜೊತೆಗೆ, ಹಸು ಖರೀದಿಗೆ 40 ಸಾವಿರ ರೂ.ಗಳ ಸಬ್ಸಿಡಿ ಕೊಡಿಸುವ ಜವಾಬ್ದಾರಿ ನನ್ನದು. ಜಿಲ್ಲೆಯಲ್ಲಿ 5-10 ಸಾವಿರ ಹಸುಗಳ ಖರೀದಿಗಾದರೂ ಸಬ್ಸಿಡಿ ಕೊಡಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

### ಇನ್ನೂ ತಲುಪದ ಮನ್ನಾ ಹಣ

ಕೊಡಗನೂರು ಪತ್ತಿನ ಸಹಕಾರ ಸಂಘದಲ್ಲಿ ಲೆಕ್ಕ ಪರಿಶೋಧನೆ ಮಾಡಿಸದ ಕಾರಣ ರೈತರ ಸಾಲ ಮನ್ನಾ ಹಣ ಬಾಕಿ ಉಳಿದಿದೆ. ಅದರ ಬಡ್ಡಿಯೂ ಬೆಳೆದಿದೆ. ರೈತರು ಹಳೆ ಸಾಲ ತೀರಿಸಲಾಗದೇ, ಹೊಸ ಸಾಲ ಪಡೆಯಲಾಗದೇ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

# ಹರಿಹರ ತಾಲ್ಲೂಕು ಗ್ರಾ.ಪಂ. ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆ

ಮಲೇಬೆನ್ನೂರು. ಆ.13- ಹರಿಹರ ತಾಲ್ಲೂಕಿನ 23 ಗ್ರಾಮ ಪಂಚಾಯಿತಿಗಳ 2ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಇದೇ ದಿನಾಂಕ 16 ರಿಂದ 24 ರವರೆಗೆ ದಿನಾಂಕಗಳನ್ನು ನಿಗದಿ ಮಾಡಿ ತಹಶೀಲ್ದಾರ್ ಪೃಥ್ವಿ ಸಾನಿಕಂ ಅವರು ಆದೇಶ ಹೊರಡಿಸಿದ್ದಾರೆ. ಜೊತೆಗೆ ಚುನಾವಣಾಧಿಕಾರಿಗಳನ್ನೂ ನೇಮಕ ಮಾಡಲಾಗಿದೆ.

ದಿನಾಂಕ 16 ರ ಬುಧವಾರ ಹನಗವಾಡಿ ಮತ್ತು ದಿನಾಂಕ 17 ರ ಗುರುವಾರ ಬೆಳ್ಳೂಡಿ, ಕುಣೆಬೆಳಕೆರೆ, ವಾಸನ. ದಿನಾಂಕ 18 ರ ಶುಕ್ರವಾರ ರಾಜನಹಳ್ಳಿ, ನಂದಿಗಾವಿ, ಸಾಲಕಟ್ಟೆ, ಎಳೆಹೊಳೆ, ಕುಂಬಳೂರು, ಕೆ.ಎನ್. ಹಳ್ಳಿ, ಯಲವಟ್ಟಿ, ಉಕ್ಕಡಗಾತ್ರಿ, ಕೊಕ್ಕನೂರು. ದಿನಾಂಕ 19 ರ ಶನಿವಾರ ಸಾರಥಿ, ಬನ್ನಿಕೋಡು, ದೇವರಬೆಳಕೆರೆ, ಭಾನುವಳ್ಳಿ, ಜಿಗಳಿ, ಹಾಲಿವಾಣ. ದಿನಾಂಕ 21 ರ ಸೋಮವಾರ ಹೊಳೆಸಿರಿಗೆರೆ. ದಿನಾಂಕ 22 ರ ಮಂಗಳವಾರ ಕೆ. ಬೇವಿನಹಳ್ಳಿ ಹಾಗೂ ದಿನಾಂಕ 23 ರ ಬುಧವಾರ ಹರಳಹಳ್ಳಿ. ದಿನಾಂಕ 24ರ ಗುರುವಾರ ಕೊಂಡಜ್ಜಿ ಗ್ರಾ.ಪಂ. ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

# ದೆಹಲಿ ಸ್ವಾತಂತ್ರ್ಯೋತ್ಸವಕ್ಕೆ 10 ಸಾವಿರ ಪೊಲೀಸರ ರಕ್ಷಣೆ

ನವದೆಹಲಿ, ಆ. 13 – ಕೆಂಪು ಕೋಟೆಯಲ್ಲಿ ನಡೆಯಲಿರುವ ಸ್ವಾತಂತ್ರ್ಯೋತ್ಸವದ ಭದ್ರತೆಗಾಗಿ ಮುಖ ಗುರುತಿಸುವ ಸಾವಿರ ಕ್ಯಾಮರಾಗಳು, ಡ್ರೋನ್ ನಿಗ್ರಹ ವ್ಯವಸ್ಥೆ ಹಾಗೂ 10 ಸಾವಿರಕ್ಕೂ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ಬಳಸಲಾಗುತ್ತಿದೆ.

ಮಂಗಳವಾರ ನಡೆಯಲಿರುವ 77ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಯಾವುದೇ ಕೊರೊನಾ ನಿರ್ಬಂಧ ಇರುವುದಿಲ್ಲ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಹರಿಯಾಣದ ನುಹ್ ಜಿಲ್ಲೆಯಲ್ಲಿ ಸಂಭವಿಸಿದ ಹಿಂಸಾಚಾರದ ಹಿನ್ನೆಲೆಯಲ್ಲಿ ಪೊಲೀಸರು ಬಿಗಿ ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

# ಅಸಹಜ ಕಾಮ, ವ್ಯಭಿಚಾರ ನ್ಯಾಯ ಸಂಹಿತೆಯಲ್ಲಿ ಅಪರಾಧವಲ್ಲ

ನವದೆಹಲಿ, ಆ. 13 - ಅಸಹಜ ಕಾಮ ಹಾಗೂ ವ್ಯಭಿಚಾರಗಳನ್ನು ಅಪರಾಧಗಳೆಂದು ಪರಿಗಣಿಸದೇ ಇರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕೇಂದ್ರ ಸರ್ಕಾರ ಮಂಡಿಸಿರುವ ಭಾರತೀಯ ನ್ಯಾಯ ಸಂಹಿತೆ ಮಸೂದೆಯಲ್ಲಿ ಈ ಎರಡೂ ಅಪರಾಧಗಳ ಪ್ರಸ್ತಾವನೆ ಇಲ್ಲ.

ಈ ಹಿಂದಿನ ಐ.ಪಿ.ಸಿ. ಸೆಕ್ಷನ್ 377 ಅನ್ವಯ ಅಸಹಜ ಕಾಮ ಶಿಕ್ಷಾರ್ಹವಾಗಿತ್ತು. 2018ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿ ಸೆಕ್ಷನ್ 377 ಅನ್ನು ಅಪರಾಧ ಮುಕ್ತ ಮಾಡಿತ್ತು. ಆದರೂ, ಅಪ್ರಾಪ್ತರಿಗೆ ಸಂಬಂಧಿಸಿದಂತೆ ಈ ಸೆಕ್ಷನ್ ಮುಂದುವರೆಸಲಾಗಿತ್ತು. ನಂತರ ನ್ಯಾಯಾಲಯ ಸೆಕ್ಷನ್ 497ರಲ್ಲಿದ್ದ ವ್ಯಭಿಚಾರದ ಅಂಶವನ್ನೂ ಕೈ ಬಿಟ್ಟಿತ್ತು.

# ಶ್ರೀ ಸಿದ್ದರಾಮೇಶ್ವರ ದೇವರ 61ನೇ ರಥೋತ್ಸವದ ಧರ್ಮ ಧ್ವಜಾರೋಹಣ ಕಂಬದ ಪೂಜೆ

## ಸಚ್ಚಾರಿತ್ರ್ಯವೇ ಧರ್ಮ : ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ



ದಾವಣಗೆರೆ, ಆ.13- ಮನಸ್ಸಿನಲ್ಲಿ ವಿವಿಧ ರೂಪಗಳಲ್ಲಿ ಪ್ರಕಟಗೊಳ್ಳುವ ಭಾವನೆಗಳನ್ನು ಸಾಕ್ಷಿ ಪ್ರಜ್ಞೆಯಿಂದ ನೋಡುವುದು ಅರಿವಿನ ಮೊದಲ ಹೆಜ್ಜೆ. ಸಚ್ಚಾರಿತ್ರ್ಯವೇ ಧರ್ಮ ಮಾನವ ಆತ್ಮಸಾಕ್ಷಿ ಪ್ರಜ್ಞೆಯೊಂದಿಗೆ ಅದಮ್ಯ ಚೇತನವನ್ನು ಆನಂದಿಸಬಹುದು. ಅಂತರಂಗ ಶುದ್ಧಿಗೊಂಡ ಮಾನವನ ಮನಸ್ಸಿನಿದ್ದಲ್ಲಿ ಮಹಾದೇವನ ಸಾಕ್ಷಾತ್ಕಾರ ಸಾಧ್ಯವೆಂದು ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹೇಳಿದರು.

ನಗರದ ವೆಂಕಾಭೋವಿ ಕಾಲೋನಿಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ, ಭೋವಿ ಗುರುಪೀಠ ದಾವಣಗೆರೆ ಶಾಖಾಮಠದ ಆವರಣದಲ್ಲಿ ಜರುಗಿದ ಶಿವಯೋಗಿ ಶ್ರೀ ಸಿದ್ಧರಾಮೇಶ್ವರ ದೇವರ 61ನೇ ರಥೋತ್ಸವದ ಪ್ರಯುಕ್ತ ಧರ್ಮ ಧ್ವಜಾರೋಹಣ ಜರುಗಿದ ಸಮಾರಂಭದ ದಿವ್ಯ ಅಧ್ಯಕ್ಷತೆ ವಹಿಸಿ ಶ್ರೀಗಳು ಮಾತನಾಡಿದರು.

ದೇವರ ನಿಜ ಸ್ವರೂಪ ನಮ್ಮ ಇಂದ್ರಿಯ, ಮನಸ್ಸು, ಬುದ್ಧಿಗಳಿಗಿಂತ ಎಷ್ಟೋ ಪಟ್ಟು ಸೂಕ್ಷ್ಮವಾದುದು. ಔನ್ನತ್ಯದಲ್ಲಿ ಯಾವ ಎಣಿಕೆಗೂ ನಿಲುಕದ್ದು. ಹಾಗಿರುವಾಗ, ಅತಿಸೂಕ್ಷ್ಮವಾದ ಪರಮಾಣುವನ್ನು ನಮ್ಮ ಕಣ್ಣು ಹೇಗೆ ನೋಡಲಾರವೋ ಹಾಗೆ, ಎಲ್ಲ ಸೂಕ್ಷ್ಮ ವಸ್ತುಗಳಿಗಿಂತಲೂ ಸೂಕ್ಷ್ಮವಾಗಿರುವ ಭಗವಂತನನ್ನು ನಮ್ಮ ಯಾವ ದೈಹಿಕ ಯಂತ್ರಗಳೂ ಗ್ರಹಿಸಲಾರವು.

ಭಗವಂತನನ್ನು ಕಾಣಲು ಸಾಮಾನ್ಯ ಕಣ್ಣು, ಸಾಮಾನ್ಯ ಮನಸ್ಸು ಸಾಲದು. ವಿಶೇಷ ಮನಸ್ಸು, ವಿಶೇಷ ಬುದ್ದಿ ಬೇಕು. ಅಂಥ ಹೊಸ ದೃಷ್ಟಿ ಬರಬೇಕಾದರೆ ಅಧ್ಯಾತ್ಮಿಕ ಸಾಧನೆ ಅಗತ್ಯ. ದೈಹಿಕ ಮಾನಸಿಕ ಪರಿಶುದ್ಧತೆ ಅಗತ್ಯ. ಆದ್ದರಿಂದ ಸತ್ಯದ ಬೆಳಕಲ್ಲಿ ತೆರೆದುಕೊಳ್ಳುವ ಮನಸ್ಸುಗಳು ಶುಭ್ರವಾಗಿರುತ್ತವೆ. ತಮ್ಮನ್ನು ಅಡಿಗಡಿಗೂ ಅಳೆದು ತೂಗಿ ನೋಡುವ, ವಿಮರ್ಶೆಯ ನಿಕಷಕ್ಕೊಡ್ಡಿ ಪರೀಕ್ಷಿಸಿಕೊಳ್ಳುವ ಅಪರೂಪದ ಗುಣವನ್ನು ಬೆಳೆಸಿಕೊಂಡವರು ಮಾತ್ರ ಮನಸ್ಸಿನಿಂದ ಮಹಾದೇವನ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ. ಎಂದು ಹೇಳಿದರು.

ಈ ಸಂದರ್ಭದಲ್ಲಿ ಭೋವಿ ಸಮಾಜದ ಮುಖಂಡರಾದ ಡಿ.ಬಸವರಾಜ್, ಇಂಜಿನಿಯರ್ ಹೆಚ್.ವೆಂಕಟೇಶ್, ಎ.ಬಿ. ನಾಗರಾಜ್, ಎಚ್. ಹೇಮರಾಜ್, ಪಿ.ಶ್ರೀನಿವಾಸ್, ಪಿ. ಮಂಜುನಾಥ್, ಹೆಚ್.ಗಣೇಶ್, ಮಲೆಬೆನ್ನೂರು ಮಂಜಣ್ಣ, ಹರಿಹರ ಆದಾಪುರ ವೀರಭದ್ರಪ್ಪ, ಶಿವಣ್ಣ, ತರಕಾರಿ ಮೂರ್ತ್ಯಪ್ಪ, ಶೇಖರಪ್ಪ ಹಾಗೂ ಮತ್ತಿತರರು ಉಪಸ್ಥಿತರಿದ್ದರು.


## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ

### ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕಟಣೆ

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇವರು ಪಡೆದುಕೊಂಡಿರುವ ಈ ಕೆಳಗಿನ ಡಿಕ್ರಿ ಅಮಲ್ಜಾರಿ ಕ್ರಮದಲ್ಲಿ ಬ್ಯಾಂಕಿಗೆ ಜಪ್ತಿ/ಆಧಾರ ಮಾಡಲ್ಪಟ್ಟಿರುವ ಸ್ಥಿರ ಸೊತ್ತನ್ನು ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಘನ ನ್ಯಾಯಾಲಯದ ಆದೇಶ ಸಂಖ್ಯೆ ಡಿಆರ್/ಡಿವಿಜಿ/ದಾವಾ/103/2019-20ರ ಮೇರೆಗೆ ಈ ಕೆಳಗೆ ಕಾಣಿಸಿರುವ ಸ್ಥಿರಾಸ್ತಿಯನ್ನು ಭಡ ಸವಾಲು ಮೂಲಕ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ ನಿಯಮ 441 ಇವರ ಷರತ್ತಿಗೊಳಪಟ್ಟು ಹರಾಜು ಮಾಡಲಾಗುವುದು.

| ಕ್ರ ಸಂ. | ಬಾಕಿದಾರರ ಹೆಸರು ಮತ್ತು ವಿಳಾಸ | ಸದರಿ ಅಮಲ್ಜಾರಿ ಕ್ರಸಂ. ಮತ್ತು ಇ.ಪಿ. ಖಾತೆಯಿಂದ ಬರಬೇಕಾದ ಬಾಕಿ ಮೊತ್ತ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತುಗಳ ವಿವರ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಳ, ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಮೆ॥ ಎನ್.ಎನ್. ಏಜೆನ್ಸಿಸ್, ಮಾಲೀಕರು 1) ಶ್ರೀಮತಿ ಪುಷ್ಪಾ ಜಿ.ಎಸ್ ಕೋಂ ಲೇಟ್ ಸಿದ್ದೇಶ್ ಜಿ.ಎಸ್. 2) ನಿಖಿಲ್ ಜಿ.ಎಸ್ ಬಿನ್ ಲೇಟ್ ಸಿದ್ದೇಶ್ ಜಿ.ಎಸ್., 3) ನಿತಿನ್ ಜಿ.ಎಸ್. ಬಿನ್ ಲೇಟ್ ಸಿದ್ದೇಶ್ ಜಿ.ಎಸ್. ಮನೆ ನಂ.573, ಮಹದೇವ, 6ನೇ ಮುಖ್ಯರಸ್ತೆ, 6ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ. | ಇ.ಪಿ.ಸಂಖ್ಯೆ 18/2022-23 ರೂ. 4,80,06,139-00 (ರೂಪಾಯಿ ನಾಲ್ಕು ಕೋಟಿ ಎಂಬತ್ತು ಲಕ್ಷದ ಆರು ಸಾವಿರದ ಒಂದು ನೂರ ಮೂವತ್ತೊಂಬತ್ತು ಮಾತ್ರ) (ದಿನಾಂಕ 25-07-2023 ಕ್ಕೆ ಇದ್ದಂತೆ + ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು) | ದಾವಣಗೆರೆ ನಗರದ ಎಂ.ಸಿ.ಸಿ. ಬಿ ಬ್ಲಾಕ್, 6ನೇ ಮುಖ್ಯರಸ್ತೆ, 5ನೇ ಕ್ರಾಸ್‌ನಲ್ಲಿ ಬರತಕ್ಕ ಡೋರ್ ನಂ. 3581 ರ ಖಾಲಿ ನಿವೇಶನ ಇದರ ಅಳತೆ 140X80 ಅಡಿಗಳು. ಸೊತ್ತಿಗೆ ಚಕ್ಕುಬಂದಿ:: ಪೂರ್ವಕ್ಕೆ : ಖಾಸಗಿ ಕಟ್ಟಡ, ಪಶ್ಚಿಮಕ್ಕೆ : 6ನೇ ಮುಖ್ಯರಸ್ತೆ, ಉತ್ತರಕ್ಕೆ : ಖಾಲಿ ನಿವೇಶನ, ದಕ್ಷಿಣಕ್ಕೆ : ಖಾಸಗಿ ಕಟ್ಟಡ. | ದಿನಾಂಕ 23-08-2023 ನೇ ಬುಧವಾರ ಮಧ್ಯಾಹ್ನ 12-00 ಗಂಟೆಗೆ ಹರಾಜಿಗೆ ಒಳಪಟ್ಟ ಸೊತ್ತಿನ ಮುಂಭಾಗದಲ್ಲಿ. | 1,00,000=00 |

**ಹರಾಜಿನ ಷರತ್ತುಗಳು :-** (1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ./ನಗದು ಮುಖಾಂತರ ಪಾವತಿಸಬೇಕು(ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ ಕಾರ್ಡ್ ಹಾಗೂ ಪಾನ್ ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಚಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಹರಾಜಿಗಿಟ್ಟ ಸ್ಥಿರ ಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ವ್ಯತ್ಯಾಸ ಉಂಟಾದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. (7) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡ 5 ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38(4)(1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (9) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (10) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (11) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (12) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ**. (13) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11-00 ಘಂಟೆಯಿಂದ ಸಂಜೆ 5-00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (14) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ದಿನಾಂಕ : 11-08-2023
ಸ್ಥಳ : ದಾವಣಗೆರೆ

ಸಹಿ/-**ಬಸವರಾಜ್ ಎಂ.**
**ಪ್ರಧಾನ ವ್ಯವಸ್ಥಾಪಕರು**

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಆದೇಶದ ಮೇರೆಗೆ
ಸಹಿ/- **ಜ್ಯೋತಿ ಮಾಳಾಪುರ, ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ, (ನಿ.441)**
ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ಲಿ.,ದಾವಣಗೆರೆ.

# ಆದ್ಯತೆ ಮೇಲೆ ಬಿಸಿಯೂಟ ತಯಾರಕರ ಬೇಡಿಕೆ ಪರಿಶೀಲಿಸಿ ಈಡೇರಿಸುವ ಭರವಸೆ

## ಬೆಂಗಳೂರಿನ ಸಮಗ್ರ ಶಿಕ್ಷಣ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಶಿಕ್ಷಣ ಮಂತ್ರಿ ಮಧು ಬಂಗಾರಪ್ಪ

ದಾವಣಗೆರೆ, ಆ. 13- ಬಿಸಿಯೂಟ ತಯಾರಕರ ಬೇಡಿಕೆಗಳನ್ನು ಆದ್ಯತೆ ಮೇರೆಗೆ ಪರಿಶೀಲಿಸಿ ಈಡೇರಿಸುವುದಾಗಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಬಿಸಿಯೂಟ ತಯಾರಕರ ಪದಾಧಿಕಾರಿಗಳಿಗೆ ತಿಳಿಸಿದರು.

ಬೆಂಗಳೂರಿನ ಸಮಗ್ರ ಶಿಕ್ಷಣ ಕಚೇರಿಯಲ್ಲಿ ಎ ಐ ಟಿ ಯು ಸಿ ಸಂಯೋಜಿತ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಸಮಿತಿ ಪದಾಧಿಕಾರಿಗಳೊಂದಿಗೆ ಶುಕ್ರವಾರ ನಡೆದ ಸಭೆಯಲ್ಲಿ ಬಿಸಿಯೂಟ ತಯಾರಕರ ಹಲವಾರು ಬೇಡಿಕೆ ಮತ್ತು ಸಮಸ್ಯೆಗಳ ಕುರಿತು ಅವರು ಚರ್ಚಿಸಿದರು.

ಈಗಾಗಲೇ ಶಿಕ್ಷಣ ಇಲಾಖೆ ಕಮೀಷನರ್ ರವರು ಆದೇಶ ಮಾಡಿರುವಂತೆ ಮುಖ್ಯೋಪಾಧ್ಯಾಯರ ಮತ್ತು ಎಸ್‌ಡಿಎಂಸಿ ಅಧ್ಯಕ್ಷರ ಬ್ಯಾಂಕ್ ಜಂಟಿ ಖಾತೆ ಮಾಡಿಸಲು ಮಾಡಿರುವ ಆದೇಶವನ್ನು ರದ್ದುಪಡಿಸಿ ಅಡುಗೆಯವರು ಮತ್ತು ಮುಖ್ಯೋಪಾಧ್ಯಾಯರ ಬ್ಯಾಂಕ್ ಜಂಟಿ ಖಾತೆಯನ್ನು ಮುಂದುವರೆಸಬೇಕೆಂದು ಸಭೆಯಲ್ಲಿ ಒತ್ತಾಯ ಪಡಿಸಲಾಯಿತು. ಈಗಾಗಲೇ ನಿವೃತ್ತಿಯಾದ ಬಿಸಿಯೂಟ ತಯಾರಕರಿಗೆ ಇಡಿಗಂಟು ಹಣ ಕೊಡುವುದು ಸೇರಿದಂತೆ ಕಳೆದ ಬಜೆಟ್ ನಲ್ಲಿ ಸರ್ಕಾರ ಘೋಷಣೆ ಮಾಡಿದ ಒಂದು ಸಾವಿರ ರೂಪಾಯಿಯನ್ನು ಜೂನ್ ನಿಂದಲೇ ಕೊಡಬೇಕು ಸೇರಿದಂತೆ ಮತ್ತಿತರೆ ಪ್ರಮುಖ ಬೇಡಿಕೆಗಳನ್ನು ಶೀಘ್ರವಾಗಿ ಇತ್ಯರ್ಥ ಪಡಿಸಬೇಕೆಂದು ಸಂಘಟನೆಯಿಂದ ಸಚಿವರ ಗಮನಕ್ಕೆ ತರಲಾಯಿತು. ಸಂಘಟನೆಯವರ ಎಲ್ಲಾ ಬೇಡಿಕೆಗಳನ್ನು ಆಲಿಸಿದ ಸಚಿವರು ಮಾತನಾಡಿ, ಆದ್ಯತೆ ಮೇರೆಗೆ ನಿಮ್ಮ ಬೇಡಿಕೆಗಳನ್ನು ಪರಿಶೀಲಿಸಿ ಇತ್ಯರ್ಥ ಪಡಿಸಲಾಗುವುದು ಎಂದು ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರಿಗೆ ತಿಳಿಸಿದರು.



ಸಭೆಯಲ್ಲಿ ಶಿಕ್ಷಣ ಇಲಾಖೆ ಆಯುಕ್ತರು, ಮಧ್ಯಾಹ್ನ ಉಪಹಾರ ಯೋಜನೆ ಸಹಾಯಕ ನಿರ್ದೇಶಕರು ಹಾಗು ಇತರೆ ಅಧಿಕಾರಿಗಳು ಭಾಗವಹಿಸಿದ್ದರು.

ಬಿಸಿಯೂಟ ತಯಾರಕರ ಫೆಡರೇಷನ್ ನ ರಾಜ್ಯಾಧ್ಯಕ್ಷ ಹೊನ್ನಪ್ಪ ಮರೆಮ್ಮನವರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು, ರಾಜ್ಯ ಖಜಾಂಚಿ ರುದ್ರಮ್ಮ ಬೆಳಲಗೆರೆ, ಮುಖಂಡರುಗಳಾದ ತುಮಕೂರು ಜಿಲ್ಲೆಯ ಪುಷ್ಪಲತಾ, ಉಮಾದೇವಿ, ಯಾದಗಿರಿ ಜಿಲ್ಲೆಯ ಕಲ್ಪನಾ, ಶ್ರೀದೇವಿ, ರಾಮನಗರ ಜಿಲ್ಲೆಯ ನಿರ್ಮಲ, ಸಾಕಮ್ಮ, ಹಾವೇರಿ ಜಿಲ್ಲೆಯ ರಾಜೇಶ್ವರಿ ದೊಡ್ಡಮನಿ, ಲಲಿತ ಬುಶೆಟ್ಟಿ, ಶಿವಮೊಗ್ಗ ಜಿಲ್ಲೆಯ ಜಿ ಜಿ ಅಕ್ಕಮ್ಮ, ಪರಮೇಶ್ವರ ಹೊಸಕೊಪ್ಪ, ಕೊಪ್ಪಳ ಜಿಲ್ಲೆಯ ಬೇಗಂ ,ಬೀದರ್ ಜಿಲ್ಲೆಯ ಶಾಂತಕುಮಾರ ಹುಮನಾಬಾದ್, ಚಂದ್ರಶೇಖರ ಪಾಟೀಲ, ಚಿತ್ರದುರ್ಗ ಜಿಲ್ಲೆಯ ಹಳೆಹಳ್ಳಿ ರೇಖಾ, ದಾವಣಗೆರೆ ಜಿಲ್ಲೆಯ ಜ್ಯೋತಿ ಲಕ್ಷ್ಮಿ, ಸರೋಜ, ಮೈಸೂರು ಜಿಲ್ಲೆಯ ಸೋಮರಾಜ ಅರಸ್, ಉತ್ತರ ಕನ್ನಡ ಜಿಲ್ಲೆಯ ಸರಸ್ವತಿ ಭಟ್, ಮೋಹಿನಿ ಸೇರಿದಂತೆ ರಾಜ್ಯ ಸಮಿತಿಯ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

# ಬಾಪೂಜಿ ಹಾಲ್ ಅಭಿವೃದ್ಧಿಗೆ ಆಗ್ರಹಿಸಿ ಇಂದು ಮಧ್ಯರಾತ್ರಿ ಧ್ವಜಾರೋಹಣ



ಮಲೇಬೆನ್ನೂರು, ಆ. 13 - ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿರುವ ಸ್ವಾತಂತ್ರ್ಯ ಪೂರ್ವದ ಶಿಥಿಲಾವಸ್ಥೆಯಲ್ಲರುವ 'ಬಾಪೂಜಿ ಹಾಲ್' ಕಟ್ಟಡದಲ್ಲಿ ನಾಳೆ ದಿನಾಂಕ 14 ರ ಸೋಮವಾರ ಮಧ್ಯರಾತ್ರಿ ಧ್ವಜಾರೋಹಣ ಮಾಡುವ ಮೂಲಕ ಕಟ್ಟಡದ ಅಭಿವೃದ್ಧಿಗೆ ಒತ್ತಾಯಿಸಲಾಗು ವುದು ಎಂದು ದಾವಣಗೆರೆಯ ವಿಶ್ವ ಮಾನವ ಟ್ರಸ್ಟ್ ಸಂಸ್ಥಾಪಕ ಹಾಗೂ ಸಾಮಾಜಿಕ ಹೋರಾಟಗಾರ ಆವರಗೆರೆ ರುದ್ರಮುನಿ ಘೋಷಿಸಿದರು.

ಅವರು ಶುಕ್ರವಾರ ಪಾಳು ಬಿದ್ದಿರುವ ಬಾಪೂಜಿ ಹಾಲ್ ಕಟ್ಟಡಕ್ಕೆ ಭೇಟಿ ನೀಡಿ ಮಹಾತ್ಮ ಗಾಂಧಿ ವಿಶ್ರಾಂತಿ ಪಡೆದಿದ್ದ ಈ ಕಟ್ಟಡ ನೋಡಿ ಬೇಸರ ವ್ಯಕ್ತಪಡಿಸಿ ಇದರ ರಕ್ಷಣೆಗೆ ಜಿಲ್ಲಾಡಳಿತ ತಕ್ಷಣ ಮುಂದಾಗಬೇಕೆಂದು ಆಗ್ರಹಿಸಿದರು. ವಿಳಂಬ ಮಾಡಿದರೆ ಇಲ್ಲಿಯೇ ಧರಣಿ ನಡೆಸುವ ನಿರ್ಧಾರ ಪ್ರಕಟಿಸುತ್ತೇನೆ. ಒಂದು ವೇಳೆ ಮೃತಪಟ್ಟರೆ ನನ್ನನ್ನು ಇಲ್ಲಿಯೇ ಸಮಾಧಿ ಮಾಡಿ ಎಂದು ಅಲ್ಲಿದ್ದವರಿಗೆ ಮನವಿ ಮಾಡಿದರು.

ಈ ವಿಷಯ ತಿಳಿದ ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್, ಉಪತಹಶೀಲ್ದಾರ್ ಆರ್. ರವಿ, ಪಿಎಸ್ಐ ಪ್ರಭುಕೆಳಗಿನ ಮನಿ, ಪುರಸಭೆಯ ಉಮೇಶ್, ಪ್ರಭು, ಕಂದಾಯ ನಿರೀಕ್ಷಕ ಎಲ್. ಆನಂದ್, ಗ್ರಾಮಾಡಳಿತಾಧಿಕಾರಿ ಅಣ್ಣಪ್ಪ ಮತ್ತಿತರರು ಸ್ಥಳಕ್ಕೆ ಆಗಮಿಸಿ ರುದ್ರಮುನಿ ಅವರನ್ನು ಸಮಾಧಾನ ಪಡಿಸಲು ಮುಂದಾದರು.

ಸರ್ಕಾರಿ ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಓ.ಜಿ. ಮಂಜುನಾಥ್, ಸದಸ್ಯ ಪೂಜಾರ್ ಬೀರಪ್ಪ, ಶಿಕ್ಷಕರೊಟ್ಟಿಗೆ ಆಗಮಿಸಿ ಈ ಪವಿತ್ರ ಕಟ್ಟಡದ ಮರದ ಮುಟ್ಟು, ಹೆಂಚು, ಬಾಗಿಲು ಕಳುವಾಗಿವೆ. ಇಂದಿನ ಈ ಸ್ಥಿತಿಗೆ ಯಾರು ಕಾರಣ, ಹಾಲಿ ಯಾರ ವಶದಲ್ಲಿದೆ, ಏಕೆ ಪಾಲನೆ ಮಾಡಿಲ್ಲ ಎಂದು ಪ್ರಶ್ನಿಸಿ ಹಿಡಿ ಶಾಪ ಹಾಕಿದರು.

ಈ ಹಳೆ ಕಟ್ಟಡ ತೆರವು ಮಾಡಿ ಗಾಂಧಿ ಪ್ರತಿಮೆ ಇಡುವಂತೆ, ಗ್ರಂಥಾಲಯ, ಆಟದ ಮೈದಾನ ನಿರ್ಮಾಣ ಮಾಡುವಂತೆ ಉಪಸ್ಥಿತರಿದ್ದ ಕೆಲವರು ಸಲಹೆ ನೀಡಿದರು.

ಕೊನೆಗೆ ಈ ಕುರಿತು ಪುರಸಭೆ ಕಚೇರಿಯಲ್ಲಿ ಸಭೆ ನಡೆಸಿ ಕಂದಾಯ ಇಲಾಖೆಯ ದಾಖಲೆ ಪರಿಶೀಲನೆ ಮಾಡಿ ಜಾಗದ ಮಾಲೀಕತ್ವದ ಕುರಿತು ಚರ್ಚಿಸಿದರು.

ಮಹಾತ್ಮಗಾಂಧೀಜಿ ಭಾಷಣ ಮಾಡಿ ಸ್ವಾತಂತ್ರ್ಯದ ಕಿಡಿ ಹಚ್ಚಿದ ಸ್ಥಳದ ಸ್ಥಿತಿ ಹಾಳಾಗಲು ಬಿಡುವುದಿಲ್ಲ. ಜಿಲ್ಲಾ ಮಂತ್ರಿಗಳು, ಜಿಲ್ಲಾಡಳಿತ, ಸಂಘ- ಸಂಸ್ಥೆಗಳ ಮುಂದೆ ಜೋಳಿಗೆ ಹಿಡಿದು ಸರ್ಕಾರದಿಂದ ಅನುದಾನ ತಂದೇ ತರುವುದಾಗಿ ರುದ್ರಮುನಿ ಪಟ್ಟು ಹಿಡಿದರು. ದೇಶ ಹಾಗೂ ರಾಷ್ಟ್ರಾಭಿಮಾನ ಮೆರೆಸಲು ನಾಡಿದ್ದು ದಿನಾಂಕ 14 ರಂದು ಆ ಕಟ್ಟಡದಲ್ಲಿಯೇ ಧ್ವಜಾರೋಹಣ ಮಾಡಿ ಮುಂದಿನ ವರ್ಷದೊಳಗೆ 'ಬಾಪೂಜಿ ಹಾಲ್' ಅನ್ನು ಹೊಸದಾಗಿ ಕಟ್ಟುವ ಸಂಕಲ್ಪ ಮಾಡಿದರು.

ಪುರಸಭೆ ಸದಸ್ಯರಾದ ಸಾಬೀರ್ ಅಲಿ, ಬಿ. ಮಂಜುನಾಥ್, ನಯಾಜ್, ಭೋವಿ ಶಿವು, ಭಾನುವಳ್ಳಿ ಸುರೇಶ್ ಮಾತನಾಡಿ ಸಹಕಾರ ನೀಡುವುದಾಗಿ ತಿಳಿಸಿದರು.

ಒಟ್ಟಾರೆ ಸ್ವಾತಂತ್ರ್ಯ ದಿನಾಚರಣೆ ಸಮಯದಲ್ಲಿ ಬಂಗ್ಲೆ ಖರಾಬ್ ಪ್ರದೇಶದ ಬಾಪೂಜಿ ಹಾಲ್ ಹಾಳಾಗಿರುವ ವಿಚಾರ ಚರ್ಚೆಗೆ ಗ್ರಾಸವಾಗಿದೆ.

ಸಾಕಷ್ಟು ಬಾರಿ ಈ ಕಟ್ಟಡದ ಜೀರ್ಣೋದ್ಧಾರಕ್ಕಾಗಿ ಪ್ರಯತ್ನ ನಡೆಸಿ ಸ್ಪಂದನೆ ಸಿಗದೆ ಇದ್ದಾಗ ಹೋರಾಟಗಾರರು ಬೇಸತ್ತು ಕೈಬಿಟ್ಟಿದ್ದರು. ಈಗ ಮತ್ತೆ ಈ ಸ್ಥಳ ಪುನರುತ್ಥಾನಗೊಳ್ಳುವ ಆಸೆ ಚಿಗುರೊಡೆದಿದೆ.

# ಗೋವಿನಕೋವಿ ಪಂಚಾಯಿತಿ ಅಧ್ಯಕ್ಷರಾಗಿ ದಾನೇಶ್, ಉಪಾಧ್ಯಕ್ಷರಾಗಿ ಶಶಿಕಲಾ



ನ್ಯಾಮತಿ, ಆ. 13 - ನ್ಯಾಮತಿ ತಾಲ್ಲೂಕು ಗೋವಿನಕೋವಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ದಾನೇಶ್, ಉಪಾಧ್ಯಕ್ಷರಾಗಿ ಎಚ್.ಎಂ. ಶಶಿಕಲಾ ಅವಿರೋಧವಾಗಿ ಆಯ್ಕೆಯಾದರು. ಪಂಚಾಯಿತಿ ಸದಸ್ಯ ರಾದ ಶಿಲ್ಪಾ, ಜಿ.ಎಚ್.ಶ್ವೇತಾ, ಎಚ್.ಎ.ಸಿದ್ದೇಶಪ್ಪ, ಎ.ಕೆ.ನರಸಿಂಹಪ್ಪ, ಮಹೇಶ್ವರಪ್ಪ, ನರಸಿಂಹಪ್ಪ, ಸುನೀತ, ಮಂಜಾನಾಯ್ಕ, ಲಕ್ಷ್ಮಪ್ಪ, ಪಿಡಿಒ ಸತೀಶ್ ಕುಮಾರ, ಕಾರ್ಯದರ್ಶಿ ಕೆ.ಮಂಜುಳಾ ಇತರರು ಇದ್ದರು.

# ಹರಿಹರ : ಬಿ.ಎಲ್.ಓ. ಕಾರ್ಯ ವೈಖರಿ ಪರಿಶೀಲನೆ



ಹರಿಹರ, ಆ. 13 - ತಾಲ್ಲೂಕಿನ ರಾಜನಹಳ್ಳಿ, ಹಲಸಬಾಳು, ಬಿಳಸನೂರು ಸೇರಿದಂತೆ ವಿವಿಧ ಅಂಗನವಾಡಿ ಕೇಂದ್ರಗಳಿಗೆ ಉಪವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ ಅವರು ಭೇಟಿ ಕೊಟ್ಟು ಬಿ.ಎಲ್.ಓ.ಗಳ ಕಾರ್ಯವೈಖರಿ ಪರಿಶೀಲನೆ ನಡೆಸಿದರು. ಈ ವೇಳೆ ಮತದಾರರ ಪಟ್ಟಿಯ ಪರಿಷ್ಕರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ಪೃಥ್ವಿ ಸಾನಿಕಂ, ಅಂಗನವಾಡಿ ಶಿಕ್ಷಕಿ ಸುವಿತ್ರ ರಾಜನಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

# ಸಂಹಿತೆಯಲ್ಲಿರುವ ಪ್ರಸ್ತಾವನೆಗಳು

(1ನೇ ಪುಟದಿಂದ) ಕೈಕೋಳ ತೊಡಿಸಬಹುದು.

ಯಾವುದೇ ವ್ಯಕ್ತಿ ಬಂಧನಕ್ಕೊಳಗಾಗದೇ ಇದ್ದರೂ ತನ್ನ ಹಸ್ತಾಕ್ಷರ, ಬರವಣಿಗೆ, ಧ್ವನಿ ಇಲ್ಲವೇ ಬೆರಳಚ್ಚನ್ನು ನೀಡುವಂತೆ ನ್ಯಾಯಾಧೀಶರು ಆದೇಶ ನೀಡಬಹುದು ಎಂಬ ಅಂಶವೂ ಮಸೂದೆಯಲ್ಲಿದೆ.

ಅಪರಾಧಗಳ ತನಿಖೆ, ಎಫ್.ಐ.ಆರ್. ದಾಖಲು ಹಾಗೂ ಸಮನ್ಸ್ ಕಳಿಸಲು ತಂತ್ರಜ್ಞಾನ ಹಾಗೂ ವಿಧಿ ವಿಜ್ಞಾನ ಬಳಸಬಹುದು. ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಸಮನ್ಸ್ ಕಳಿಸಲೂ ಅವಕಾಶ ನೀಡಲಾಗುವುದು.

ಎಫ್.ಐ.ಆರ್. ವರದಿ ಪಡೆಯುವುದನ್ನು ಸರಳಗೊಳಿಸಲಾಗಿದೆ. ಸಂತ್ರಸ್ತರಿಗೆ ಪ್ರಕರಣದ ಪ್ರಗತಿಯ ಬಗ್ಗೆ ಡಿಜಿಟಲ್ ಮೂಲಕ ಮಾಹಿತಿ ನೀಡಲಾಗುವುದು. ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆಗೂ ಅವಕಾಶ ಇರಲಿದೆ. ಏಳು ವರ್ಷಕ್ಕಿಂತ ಕಡಿಮೆ ಶಿಕ್ಷೆಯಾಗುವ ಪ್ರಕರಣಗಳನ್ನು ವಾಪಸ್ ಪಡೆಯಲು ಅವಕಾಶ ಇರಲಿದೆ. ಯಾವುದೇ ವ್ಯಕ್ತಿ ಯಾವುದೇ ಪೊಲೀಸ್ ಠಾಣೆಯಲ್ಲಿ ಬೇಕಾದರೂ ಎಫ್.ಐ.ಆರ್. ದಾಖಲಿಸಬಹುದು. 15 ದಿನಗಳಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ಠಾಣೆಗೆ ಎಫ್.ಐ.ಆರ್. ರವಾನಿಸಲಾಗುವುದು. ವಿಚಾರಣೆ, ಮನವಿ, ಹೇಳಿಕೆ ದಾಖಲಿಸುವುದು ಇತ್ಯಾದಿಗಳನ್ನು ಎಲೆಕ್ಟ್ರಾನಿಕ್ ಮಾರ್ಗದ ಮೂಲಕ ಕೈಗೊಳ್ಳಬಹುದು. ಸಮನ್ಸ್, ವಾರಂಟ್, ದಾಖಲೆ, ಪೊಲೀಸ್ ದಾಖಲೆ, ಹೇಳಿಕೆಗಳನ್ನೂ ಎಲೆಕ್ಟ್ರಾನಿಕ್ ಸ್ವರೂಪದಲ್ಲಿ ಕಳಿಸಬಹುದು.

ಮರಣ ದಂಡನೆ ಸಂದರ್ಭದಲ್ಲಿ ಕ್ಷಮಾದಾನಕ್ಕೆ ಅರ್ಜಿ ಸಲ್ಲಿಸುವುದಕ್ಕೆ ಕಾಲಮಿತಿ ನಿಗದಿ ಪಡಿಸಲಾಗಿದೆ. ಮರಣದಂಡನೆ ವಿಧಿಸಿದ 30 ದಿನಗಳಲ್ಲಿ ಶಿಕ್ಷೆಗೆ ಒಳಗಾದವರು ಇಲ್ಲವೇ ಉತ್ತರಾಧಿಕಾರಿ ಇಲ್ಲವೇ ಸಂಬಂಧಿಗಳು ರಾಜ್ಯಪಾಲರಿಗೆ ಮನವಿ ಸಲ್ಲಿಸಬೇಕಿದೆ. ತಿರಸ್ಕೃತವಾದಲ್ಲಿ, 60 ದಿನಗಳಲ್ಲಿ ರಾಷ್ಟ್ರಪತಿಗೆ ಮನವಿ ಸಲ್ಲಿಸಬಹುದು.

# ಹೊನ್ನಾಳಿಯಲ್ಲಿನ ಸ್ವಾತಂತ್ರ್ಯ ದಿನಾಚರಣೆಗೆ ಸನ್ಮಾನಿತರ ಆಯ್ಕೆ

ಹೊನ್ನಾಳಿ, ಆ.13- 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ನಾಡಿದ್ದು ದಿನಾಂಕ 15ರ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಹೊನ್ನಾಳಿ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆಯಲಿದೆ. ಸಮಾರಂಭದಲ್ಲಿ ರಾಷ್ಟ್ರಪ್ರಶಸ್ತಿ ಪುರಸ್ಕೃತೆ ಟಿ. ನಾಗರತ್ನಮ್ಮ, ಮಾಜಿ ಸೈನಿಕರಾದ ಕೆ.ಸುಧಾಮಪ್ಪ, ಚಂದ್ರಪ್ಪ, ಎಸ್.ಜಿ. ಸತ್ಯಪ್ಪ, ಹೆಚ್.ಎಸ್.ಕೃಷ್ಣನಾಯ್ಕ ಹಾಗೂ ಅತಿ ಹೆಚ್ಚು ಅಂಕ ಗಳಿಸಿದ ಅರಕೇರಿ ಹೇಮಾವತಿ ಕೆ.ಆರ್., ಹೊನ್ನಾಳಿ ಸ್ವಪ್ನ ಎಂ, ಹತ್ತೂರು ಜ್ಯೋತಿ ಹೆಚ್.ಎಸ್, ಹೊನ್ನಾಳಿ ಕವನ ಎಂ.ಬಿ., ಎರೆಚಿಕ್ಕನಹಳ್ಳಿ ಜೀವಿಕಾ ಪಾಟೀಲ್, ಕಾರಣ್ಯಶ್ರೀ ಆರ್. ಅವರನ್ನು ಸನ್ಮಾನಿಸಲಾಗುವುದು ಎಂದು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಅಧ್ಯಕ್ಷರು ಹಾಗೂ ತಹಶೀಲ್ದಾರ್ ತಿರುಪತಿ ತಿಳಿಸಿದ್ದಾರೆ.

# ಗಂಗಾ ಸಹಕಾರಿ ಬ್ಯಾಂಕ್‌ನಲ್ಲಿ ದೇವರಾಜ ಅರಸು ಜಯಂತಿ

ರಾಣೇಬೆನ್ನೂರು, ಆ.13- ಇಲ್ಲಿನ ಗಂಗಾ ವಿವಿಧೋದ್ದೇಶ ಸಹಕಾರಿ ಬ್ಯಾಂಕ್‌ನಲ್ಲಿ ದಿವಂಗತ ದೇವರಾಜ ಅರಸು ಅವರ 108 ನೇ ಹುಟ್ಟು ಹಬ್ಬ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ನಾಡಿದ್ದು ದಿನಾಂಕ 15 ರಂದು ಬೆಳಿಗ್ಗೆ ಕರಾವಳಿ ಸಭಾಭವನದಲ್ಲಿ ನಡೆಯಲಿದೆ.



ಜನವಾಡ ಅಲ್ಲಮಪ್ರಭು ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಡಾ. ನಾಗರಾಜ ದೊಡ್ಮನಿ ಉದ್ಘಾಟಿಸುವರು. ಡಾ. ಕಾಂತೇಶ ಅಂಬಿಗೇರ, ಹುಬ್ಬಳ್ಳಿಯ ಹರಿಓಂ ಸುಧಾಕರ ಶೆಟ್ಟಿ ಅತಿಥಿಗಳಾಗಿ ಆಗಮಿಸುವರು. ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷ ರತ್ನಾಕರ ಕುಂದಾಪೂರ ವಹಿಸುವರು.

# ಕರುಣಾದಿಂದ ಬಡವರಿಗೆ ಸೈಕಲ್ ಖರೀದಿಸಲು ಹಣಕಾಸಿನ ನೆರವು

ದಾವಣಗೆರೆ, ಆ.13- ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ವತಿಯಿಂದ ಕಡು ಬಡವರು ಸೈಕಲ್ ಸವಾರಿ ಮಾಡಲು ಪ್ರೋತ್ಸಾಹಿಸಲಾಗುವುದು. ಕೆಲವು ದಶಕಗಳ ಹಿಂದೆ ಸೈಕಲ್ ಹಲವು ವಿಧಗಳಲ್ಲಿ ಜೀವನದ ಅವಿಭಾಜ್ಯ ಅಂಗವಾಗಿತ್ತು. ಈಗ ಅದು ಅಳಿವಿನಂಚಿಗೆ ಬಂದಿದೆ. ಪೆಟ್ರೋಲ್ ದರ ದುಬಾರಿ ರೂ.104 ಆಗಿ, ಬಡವರಿಗೆ ನಿಲುಕದ ವಸ್ತುವಾಗಿದೆ. ಅಲ್ಲದೆ ಪೆಟ್ರೋಲ್ ವಾಹನಗಳಲ್ಲಿ ದೈಹಿಕ ಶ್ರಮವಿಲ್ಲದೆ ಇರುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮಗಳಾಗುತ್ತಿವೆ. ಪರಿಸರ ಮಾಲಿನ್ಯ ಕಡಿಮೆ ಮಾಡಲು ಹಾಗೂ ಸಾರ್ವಜನಿಕರ ಆರೋಗ್ಯ ದೃಷ್ಟಿ ಹಾಗೂ ಬಡವರ ಸಣ್ಣ ಆರ್ಥಿಕ ಉಳಿತಾಯಕ್ಕಾಗಿ ಬೆಂಬಲ ನೀಡಲು ಕರುಣಾ ಟ್ರಸ್ಟ್ ಸೈಕಲ್ ಕೊಡಿಸಲು ಬಯಸುತ್ತಿದೆ. ಬಡವರ ಆರ್ಥಿಕ ಪರಿಸ್ಥಿತಿಗೆ ಅನುಸಾರವಾಗಿ ಸೈಕಲ್ ಖರೀದಿಸಲು ಹಣಕಾಸಿನ ನೆರವು ನೀಡಲಾಗುವುದು.

ವಿವರಕ್ಕೆ ಸಂಪರ್ಕಿಸಿ: 91104 55199, 83105 20002, ಈ ಕಾರ್ಯಕ್ರಮಕ್ಕೆ ಮನೆಯಲ್ಲಿ ಉಪಯೋಗಿಸದೇ ಇರುವ ಸೈಕಲ್ಲು ಗಳನ್ನು ಟ್ರಸ್ಟಿಗೆ ನೀಡಿದರೆ ಅವುಗಳನ್ನು ರಿಪೇರಿ ಮಾಡಿಸಿ ಬಡವರಿಗೆ ನೀಡಲಾಗುವುದು ಎಂದು ಟ್ರಸ್ಟಿನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ.

# ಸಿದ್ದಗಂಗಾ ಶಾಲೆಯಲ್ಲಿ ಗಿಡಮೂಲಿಕೆ ದಿನಾಚರಣೆ



ದಾವಣಗೆರೆ, ಆ. 13- ಪತಂಜಲಿ ಯೋಗ ಸಮಿತಿ, ಭಾರತ್ ಸ್ವಾಭಿಮಾನ ಟ್ರಸ್ಟ್, ಮಹಿಳಾ ಪತಂಜಲಿ ಯೋಗ ಸಮಿತಿ, ಯುವ ಭಾರತ್ ಹಾಗೂ ಕಿಸಾನ್ ಸೇವಾ ಸಮಿತಿ ಇವರ ಸಹಯೋಗದೊಂದಿಗೆ ಶ್ರೀ ಸಿದ್ದಗಂಗಾ ಶಾಲೆಯಲ್ಲಿ ಶ್ರೀ ಸಿದ್ಧಗಂಗಾ ಯೋಗ ಕೇಂದ್ರದ 10ನೇ ವರ್ಷದ ವಾರ್ಷಿಕೋತ್ಸವ ಹಾಗೂ ಪತಂಜಲಿ ಆಯುರ್ವೇದ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಾಲಕೃಷ್ಣ ಜೀ ಇವರ ಜನ್ಮ ದಿನಾಚರಣೆ ಪ್ರಯುಕ್ತ ಪತಂಜಲಿ ಪರಿವಾರದ ವತಿಯಿಂದ ಜಡಿಬೂಟಿ ದಿವಸ್ ಅಥವಾ ಗಿಡಮೂಲಿಕೆ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಯಾಗಿ ಶ್ರೀಮತಿ ಆರತಿ ಕಾನಗೋ ಅಗ್ನಿ ಹೋತ್ರದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ, 'ಸ್ವಸ್ಥ ಸಮಾಜದ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ' ವಿಷಯದ ಕುರಿತು ಉಪನ್ಯಾಸ ಮಾಡಿದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಪಾರಂಪರಿಕ ವೈದ್ಯರು ಹಾಗೂ ಕರ್ನಾಟಕ ರಾಜ್ಯ ಪಾರಂಪರಿಕ ವೈದ್ಯರ ಸಂಘದ ಮಾಜಿ ಅಧ್ಯಕ್ಷ ನೇರ್ಲಿಗಿ ಗುರುಸಿದ್ದಪ್ಪ 'ಹಿತ್ತಲ ಗಿಡವೇ ಮದ್ದು' ಎಂಬ ವಿಷಯದ ಕುರಿತು ಮಾತನಾಡಿದರು.

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಶ್ರೀಮತಿ ಜಸ್ಟಿನ್ ಡಿ'ಸೌಜ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಪತಂಜಲಿ ಯೋಗ ಸಮಿತಿ ಮಂಡಲ ಪ್ರಭಾರಿ ಎಸ್.ಎಸ್. ಷಣ್ಮುಖಪ್ಪ, ಎನ್.ವಿ. ಸುನೀಲ್‌ಕುಮಾರ್, ಶ್ರೀಮತಿ ಜ್ಯೋತಿ ಜಂಬಗಿ, ಶ್ರೀಮತಿ ಅಂಜಲಿದೇವಿ, ಶ್ರೀಮತಿ ಚಂದ್ರಮ್ಮ, ಶ್ರೀಮತಿ ಸಾವಿತ್ರಮ್ಮ, ಕುಮಾರಿ ಪೂಜಾ, ಶ್ರೀಮತಿ ಶಾಂತ ವೀರಮ್ಮ, ಶ್ರೀಮತಿ ರೇಣುಕಾ, ಶ್ರೀಮತಿ ಇ.ಕೆ. ರೇಣುಕಾ, ಭಾರತಿ ಗಂಗಾಂಬಿಕೆ, ದೇವರಾಜ್ ಲಿಂಗರಾಜು, ಜಯಮ್ಮ, ಶಾಂತಮ್ಮ ಉಪಸ್ಥಿತರಿದ್ದು ಮಾತನಾಡಿದರು.

ಶ್ರೀಮತಿ ಸುಮತಿ ಹಾಲೇಶ್ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಎಸ್. ಮಂಜುಳಾ ಪಾಟೀಲ್ ಪ್ರಾರ್ಥಿಸಿದರು. ಶ್ರೀಮತಿ ಲತಾ ಸ್ವಾಗತಿಸಿದರು. ಮುಜೀಬ್ ಖಾನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀಮತಿ ಈರಮ್ಮ ವಂದಿಸಿದರು. ಲತಾ ಮತ್ತು ಸಂಗಡಿಗರು ಯೋಗ ನೃತ್ಯ ಹಾಗೂ ಯೋಗ ಗೀತೆ ಹಾಡಿದರು.


**ಮನೆಗಳು ಮಾರಾಟಕ್ಕಿವೆ**
ತರಳಬಾಳು ಬಡಾವಣೆ
ದಕ್ಷಿಣ 30x60, ವಿದ್ಯಾನಗರ ಪಶ್ಚಿಮ 30x60 (3ನೇ ಮಹಡಿ) ಉತ್ತರ 22x60 (ಮಳಿಗೆಗಳು ಮತ್ತು ಮೇಲೆ 2 BHK ಎರಡು ಮನೆಗಳು.)
ಐಗೂರು ವಿಜಯ್‌ಕುಮಾರ್
99457 02495

**ಬಾಡಿಗೆಗೆ ಮನೆಗಳು**
ದೊರೆಯುತ್ತವೆ ವಿಚಾರಿಸಿ
LIC ಕಾಲೋನಿಯಲ್ಲಿ, MCC 'B' Block ನಲ್ಲಿ, ಆಂಜನೇಯ ಬಡಾವಣೆಯಲ್ಲಿ.
ದಕ್ಷಿತ್ ಐನಳ್ಳಿ ಏಜೆಂಟ್
99027 56559

**ಸೈಟ್ ಮಾರಾಟಕ್ಕಿದೆ**
ಜೆ.ಹೆಚ್. ಪಟೇಲ್ ಬಡಾವಣೆಯ, ಪೋದಾರ್ ಸ್ಕೂಲ್ ಹತ್ತಿರ 20x30 ಸೈಟ್ ಮಾರಾಟಕ್ಕಿದೆ.
ಸಂಪರ್ಕಿಸಿ :
95918 29780
80731 78139

**ಮನೆಗಳು ಮಾರಾಟಕ್ಕಿವೆ**
#24, "ಸಿರಿಸಾರ" ಶ್ರೀ ದೇವರಾಜ ಅರಸ್ ಬಡಾವಣೆ, "ಬಿ" ಬ್ಲಾಕ್, 2ನೇ ಹಂತ, ಎಸ್.ಪಿ. ಆಫೀಸ್ ಎದುರುಗಡೆ ರಸ್ತೆ, ದಾವಣಗೆರೆಯಲ್ಲಿರುವ ಗ್ರೌಂಡ್ ಫ್ಲೋರ್, 2 ಮತ್ತು ಫಸ್ಟ್ ಫ್ಲೋರ್ 2
94489 63300

**EC / ಇಸಿ,**
E-swathu, Khatha Change Building Licence & Other Property Documents
96118-66449

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**ಬಾಡಿಗೆಗೆ ಬರುವಂತಹ ಮನೆಗಳು ಮಾರಾಟಕ್ಕಿವೆ**
30x50 West, 30x40 East, 30x40 West, ವಿವೇಕಾನಂದ ಬಡಾವಣೆಯಲ್ಲಿ, ಡಾಲರ್ಸ್ ಕಾಲೋನಿಯಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
45x48 South, ವಿನಾಯಕ ಬಡಾವಣೆಯಲ್ಲಿ, 30x40 North ಬನಶ್ರೀ ಲೇಔಟ್‌ನಲ್ಲಿ, 40x40 South ಡಾಲರ್ಸ್ ಕಾಲೋನಿಯಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ/ಸೈಟು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30 South ಮನೆ ಮಾರಾಟಕ್ಕಿವೆ, 20x48 West ಸೈಟ್, 20x30 South ಸೈಟ್ ಮಾರಾಟಕ್ಕಿದೆ,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ದಕ್ಷಿಣ 30x30 (ಅಕ್ಕ-ಪಕ್ಕ) 30x70, 30x50, ಸರ್ಕಾರಿ ನೌಕರರ ಬಡಾವಣೆ ಪೂರ್ವ 30x40, ಪಶ್ಚಿಮ 30x40 (ಅಕ್ಕ-ಪಕ್ಕ)
ಐಗೂರು ವಿಜಯ್‌ಕುಮಾರ್
99457 02495

**ಬೇಕಾಗಿದ್ದಾರೆ**
ತಕ್ಷಣ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹೆಲ್ಪರ್ ಮತ್ತು ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಮಳಿಗೆಗಳು ಬಾಡಿಗೆಗೆ**
2 ಮಳಿಗೆಗಳು ಬಾಡಿಗೆಗೆ ಇವೆ. ಎಸ್.ಎಸ್. ಲೇಔಟ್, ರಿಂಗ್ ರೋಡ್, ಶಾರದಾಂಬ ದೇವಸ್ಥಾನದ ಎದುರು, ದಾವಣಗೆರೆ.
91135 10950

**2 BHK HOUSE FOR RENT/LEASE**
Near Podar International in J.H. Patel Badavane, Davangere
9535841058

**ಮಳಿಗೆಗಳು ಬಾಡಿಗೆಗೆ ಇವೆ**
ಜಿಲ್ಲಾ ಕ್ರೀಡಾಂಗಣದ ಹತ್ತಿರ, 10x25 ಅಡಿ ಅಳತೆಯ ಒಂದು ಮಳಿಗೆ, ಒಂದನೇ ಮಹಡಿಯಲ್ಲಿ ಹಾಗು 25x25 ಅಡಿ ಅಳತೆಯ ಒಂದು ಮಳಿಗೆ ಎರಡನೇ ಮಹಡಿಯಲ್ಲಿ ಬಾಡಿಗೆಗೆ ಇವೆ.
ಸಂಪರ್ಕಿಸಿ.
94498 30566

**ಹೊಸ ಮನೆ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಬಡಾವಣೆ ಕಾವೇರಿ ಅಪಾರ್ಟ್‌ಮೆಂಟ್ ಹತ್ತಿರ, 30x50 ಸೈಟ್‌ನಲ್ಲಿ ಪಶ್ಚಿಮ ದಿಕ್ಕಿನ ವಾಸ್ತು ಪ್ರಕಾರ ಕಟ್ಟಿರುವ 2 ಬೆಡ್ ರೂಂನ ಹೊಸ ಮನೆ ಮಾರಾಟಕ್ಕೆ ಇದೆ.
98448 82366

**ಶ್ರೀ ಬಸವೇಶ್ವರ ಬೋರ್ ವೆಲ್ಸ್**
6 1/2 ಮತ್ತು 4 1/2 ಬೋರ್ ವೆಲ್ಸ್. ಮನೆಯ ಒಳಗೆ & ಹೊರಗೆ 300 - 350 ಅಡಿ ಕೊರೆಯಲಾಗುವುದು. ಸಂಪರ್ಕಿಸಿ :
99008 92916

**ಸ್ವಾತಂತ್ರ್ಯೋತ್ಸವದ ಕೊಡುಗೆ ಗ್ಯಾಸ್ ಗೀಸರ್ & R.O ಫಿಲ್ಟರ್**
ಸರ್ವೀಸ್ ಕೇವಲ 49/- ರೂನಲ್ಲಿ ಮನೆ ಬಾಗಿಲಿಗೆ ಸೇವೆ (Dvg Only) ಮರುತ್ ಎಂಟರ್ ಪ್ರೈಸಸ್ Y.M.C. Complex, ಹದಡಿ ರೋಡ್, ದಾವಣಗೆರೆ.
98868 96574, 98458 67574

**ಸೈಟುಗಳು ಮಾರಾಟಕ್ಕೆ ದೊರೆಯುತ್ತವೆ**
ದಾವಣಗೆರೆ ನಗರದಿಂದ ಹಾದು ಹೋಗುವ ಯರಗುಂಟೆಗೆ ಹತ್ತಿರವಿರುವ ಶಿವಪುರದಲ್ಲಿ, ಕೊಂಡಜ್ಜಿ ರಸ್ತೆಗೆ ಹೊಸದಾಗಿ ಆಗುವ ಲೇಔಟ್‌ನಲ್ಲಿ ಕೆಲವೇ ಸೈಟುಗಳನ್ನು ಮಾರಾಟ ಮಾಡುತ್ತೇವೆ.
ರೆವಿನ್ಯೂ ಸೈಟು ಮಾರಾಟಕ್ಕಿದೆ.
ಯರಗುಂಟೆಯ ಶಿವಪುರದಲ್ಲಿ ಕೊಂಡಜ್ಜಿ ರಸ್ತೆಗೆ ಸುಮಾರು 4000 ಅಡಿ ಅಳತೆಯ ಸೈಟು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ : 97424 34049

**WANTED**
Female & Male Telecaller, PUC/any Degree, Male field executives Fresher /Experienced With Attractive Salary. Address :Alpha Recruitment Service, Office Number 3, Behind Navukar Samudya Bhavana, Nijalingappa Layout, Davanagere. Contact:
8892656394, 8431565643

**WANTED**
Banking Sector field officer (Male Only)
Qualification : Any Degree
90715 55081
Interview time : 11AM

**ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿ ಮತ್ತು ಟೀ ಸ್ಟಾಲ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
88928 58649

**ವಾಣಿಜ್ಯ ಮಳಿಗೆ ಬಾಡಿಗೆಗೆ**
ನಗರದ MCC ಬಿ ಬ್ಲಾಕ್, 2ನೇ ಮೇನ್, 2ನೇ ಕ್ರಾಸ್ #2717/ಎ ರಲ್ಲಿ 1824 ಚ.ಅ. ವಿಸ್ತೀರ್ಣವಿರುವ ಮೆಡಿಕಲ್ ಸ್ಟೋರ್, ಲ್ಯಾಬ್, ಟ್ಯುಟೋರಿಯಲ್ ಇತರೆಗೆ ಯೋಗ್ಯವಾದ ಮಳಿಗೆ ಬಾಡಿಗೆಗಿದೆ.
94498 39701

**HOUSE FOR RENT (2 BHK)**
1st Floor, # 3887, Old RTO Office, MCC `B' Block, Near Ayyappa swamy Temple, Davanagere.
96111 04206

**ಮನೆ/ಮಳಿಗೆ ಬಾಡಿಗೆಗೆ ಇದೆ**
ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಹತ್ತಿರವಿರುವ ಲಕ್ಷ್ಮಿ ಲೇಔಟ್‌ನ ಅರುಣಾ ಅಪಾರ್ಟ್‌ಮೆಂಟ್‌ನಲ್ಲಿ 2/3 ಬೆಡ್ ರೂಂ ಮನೆ ಬಾಡಿಗೆಗೆ ಇದೆ ಹಾಗೂ ಗೋಡೌನ್ ಮಾಡಲಿಕ್ಕೆ ಅನುಕೂಲವಾಗಿರುವ ಮಳಿಗೆ ಬಾಡಿಗೆಗೆ ಇದೆ.
96388 17967, 73380 43912

**WANTED**
Boys required for data entry and billing work with basic computer knowledge. Food Mart Supermarket.
Quli : Any Degree
Mob : 98864 63531

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x65, 33x55, 30x55, 40x60, ಪಶ್ಚಿಮ 30x40, 30x55, ಬನಶಂಕರಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 40x65, ಪಶ್ಚಿಮ 40x70 (60 ಅಡಿ ರಸ್ತೆ)
ಐಗೂರು ವಿಜಯ್‌ಕುಮಾರ್
99457 02495

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ)
87490 98879

**WANTED**
Banking Sector Tele Caller (Female Only)
Qualification : Any Degree
90715 55081
Interview time : 11AM

**SECURITY GUARD ಬೇಕಾಗಿದ್ದಾರೆ**
ಉತ್ತಮ ವೇತನ,
70012 87756, 97409 77785

**FIRST FLOOR FOR RENT COMMERCIAL**
MCC `B' Block, Boys Hostel Road, Size 28x42 with lift
82177 72482

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000ರೂ ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

**ಗ್ಯಾಸ್ ಗೀಜರ್**
Fully Automatic 2990/- Rs.
R.O. +uv ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**PG-CET COACHING**
Start From : 07.08.2023 10.00 am to 5.00pm
Classes By Experts
STUDY MATERIAL + LAPTOP BAG 24X7 LIBRARY + WI-FI, MOCK-TEST + MENTORING
SMARUDDHI COACHING ACADEMY DAVANGERE.
9620262361, 8147262361

**JOB OPPORTUNITY**
Office Assistant We are seeking candidates with the following skills : Proficient in Tally and Excel, Fast typing speed Open to both Male and Female applicants
NEEMS DISTRIBUTORS
#574/1, 6th Main Road, PJ Extension, Near Ram & Co Circle, Davangere - 02
99169 13079

**WANTED LADY TEACHER**
BA, B.Ed (1 Post)
Contact number:
90359 16750
95358 85997

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
81056 99985
89715 04492

**ತಕ್ಷಣ ಬೇಕಾಗಿದ್ದಾರೆ**
5th, 7th, 9th, 10th PUC, Degree, ITI, Diploma ಯುವಕ-ಯುವತಿಯರು ಆಫೀಸ್‌ಗಳಿಗೆ, ಶೋ ರೂಂಗಳಿಗೆ, ಬಿಗ್ ಬಜಾರ್ ಕಂಪನಿಗಳಿಗೆ. ನೇರ ನೇಮಕಾತಿ ಸಂಬಳ : 15,500/- to 40,000/-. ವಸತಿ, ಊಟವಿದೆ.
ಮೊ. 90361 25229

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಮಾಡುತ್ತಾರೆ. ದಾವಣಗೆರೆ.
89716 99826

**CHANGE OF NAME**
I, **Geetha S.** (Aadhar Card) @ **Geetha Siddesh** (Passport) (Old Name) resident of komaranahalli Village @ post, Harihara Taluk, Davanagere Dist, I have changed my name as **Geetha Shivaputhrappa** (New Name) vide affidavit dated 11-8-23 sworn before notary I.P. Brahmakumar, Davanagere. In future all my dealings & transactions will be in my new name.
Sd/- **Geetha Shivaputhrappa**

# ಆರೋಗ್ಯವಂತ, ಶಿಸ್ತುಬದ್ಧ ಜೀವನ ರೂಢಿಸಿಕೊಳ್ಳಿ

ಬಾಲಕ-ಬಾಲಕಿಯರ ಅಂತರ್‌ಜಿಲ್ಲಾ ಮಟ್ಟದ ಫುಟ್‌ಬಾಲ್ ಪಂದ್ಯಾವಳಿಯ ಸಮಾರೋಪದಲ್ಲಿ ಪ್ರಭಾ ಎಸ್ಸೆಸ್ಸೆಂ ಕರೆ



ದಾವಣಗೆರೆ, ಆ.13- ವಿದ್ಯಾರ್ಥಿ ಯುವಜನರು ಆರೋಗ್ಯವಂತ, ಶಿಸ್ತುಬದ್ಧ ಜೀವನ ನಡೆಸುವ ಮೂಲಕ ಕ್ರೀಡೆಗಳನ್ನು ಹವ್ಯಾಸವನ್ನಾಗಿ ರೂಢಿಸಿಕೊಳ್ಳುವಂತೆ ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಕರೆ ನೀಡಿದರು.

ದಾವಣಗೆರೆ ಫುಟ್‌ಬಾಲ್ ಕ್ಲಬ್ ವತಿಯಿಂದ ನಗರದ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಇಂದು ಆಯೋಜಿಸಿದ್ದ 16 ವರ್ಷದೊಳಗಿನ ಬಾಲಕ-ಬಾಲಕಿಯರ ಅಂತರ್‌ಜಿಲ್ಲಾ ಮಟ್ಟದ ಫುಟ್‌ಬಾಲ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಯುವಜನರು ಹೃದ್ರೋಗದಂತಹ ಕಾಯಿಲೆಗೆ ತುತ್ತಾಗಿ ಸಾವನ್ನಪ್ಪುತ್ತಿದ್ದಾರೆ. ಇದಕ್ಕೆ ಕಾರಣ ಜೀವನ ಶೈಲಿ, ಆರೋಗ್ಯ ಪದ್ಧತಿ, ಅತಿಯಾದ ಮೊಬೈಲ್ ಬಳಕೆ, ಒತ್ತಡಯುಕ್ತ ಜೀವನವಾಗಿದೆ ಎಂದರು.

ದಾವಣಗೆರೆ ಕ್ರೀಡಾ ಇತಿಹಾಸದಲ್ಲೇ ಪ್ರಥಮ ಬಾರಿಗೆ ಬಾಲಕಿಯರ ಫುಟ್‌ಬಾಲ್ ಪಂದ್ಯಾವಳಿ ಆಯೋಜನೆ ಮಾಡಿರುವ ಸಂಸ್ಥೆಯ ಪದಾಧಿಕಾರಿಗಳನ್ನು ಅಭಿನಂದಿಸಿದರು. ಎಸ್.ಎಸ್. ಮಲ್ಲಿಕಾರ್ಜುನ್ ಕ್ರೀಡಾ ಸಚಿವರಾಗಿದ್ದ ಅವಧಿಯಲ್ಲಿ ನಗರದಲ್ಲಿ ನೇತಾಜಿ ಸುಭಾಷ್ಚಂದ್ರ ಭೋಸ್ ಒಳಾಂಗಣ ಕ್ರೀಡಾಂಗಣ, ಟೆನ್ನಿಸ್ ಕ್ರೀಡಾಂಗಣ, ವಾಲಿಬಾಲ್ ಅಂಕಣ, ಕ್ರಿಕೆಟ್ ಮೈದಾನಗಳನ್ನು ನಿರ್ಮಿಸುವ ಮೂಲಕ ಕ್ರೀಡಾಪ ಟುಗಳು ಹಾಗೂ ಕ್ರೀಡೆಗಳನ್ನು ಪ್ರೋತ್ಸಾಹಿಸುವ ಕೆಲಸ ಮಾಡಿದ್ದರು ಎಂದು ಹೇಳಿದರು. ಮುಂಬರುವ ದಿನಗಳಲ್ಲಿ ದಾವಣಗೆರೆಯಲ್ಲಿ ಸುಸಜ್ಜಿತ ಫುಟ್‌ಬಾಲ್ ಅಂಕಣ ನಿರ್ಮಿಸುವ ಬಗ್ಗೆ ಸಚಿವರೊಂದಿಗೆ ಚರ್ಚಿಸುವುದಾಗಿ ಹೇಳಿದ ಅವರು, ಓದಿನ ಜೊತೆಗೆ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ ಎಂದು ಕರೆ ನೀಡಿದರು.

ಜಿಲ್ಲಾ ಫುಟ್‌ಬಾಲ್ ಕ್ಲಬ್ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಮಾತನಾಡಿ, ದಾವಣಗೆರೆಯಲ್ಲಿ ಬಾಲಕಿಯರು ಸಹ ಫುಟ್‌ಬಾಲ್ ಕ್ರೀಡೆಯಲ್ಲಿ ಆಸಕ್ತಿ ತೋರಿ ಸಕ್ರಿಯವಾಗಿ ಪಾಲ್ಗೊಂಡಿರುವುದು ಸಂತಸ ತಂದಿದೆ. ಶೀಘ್ರದಲ್ಲಿಯೇ ನಗರದಲ್ಲಿ ರಾಜ್ಯ ಅಥವಾ ರಾಷ್ಟ್ರಮಟ್ಟದ ಫುಟ್‌ಬಾಲ್ ಪಂದ್ಯಾವಳಿ ಆಯೋಜನೆ ಮಾಡಲಾಗುವುದು ಎಂದರು.

ಹರಿಹರ ನಗರಸಭೆ ಮಾಜಿ ಅಧ್ಯಕ್ಷರೂ, ಕ್ರೀಡಾಪಟುಗಳೂ ಆದ ಬಿ. ರೇವಣಸಿದ್ಧಪ್ಪ, ನಿವೃತ್ತ ಯೋಧ ಚಂದ್ರಶೇಖರ್, ಫುಟ್‌ಬಾಲ್ ಕ್ಲಬ್ ಪದಾಧಿಕಾರಿಗಳಾದ ಆದಿಕೇಶವ, ಕೃಷ್ಣ ಎನ್. ಜಾಧವ್, ಗಿರೀಶ್ ಫುಟ್‌ಬಾಲ್, ಶಿಂಗ್ರಿಹಳ್ಳಿ ರಾಮದಾಸ್, ಟಿ.ಎಸ್. ಶಿವಣ್ಣ, ಪೀಲೆ ರಾಜು, ಬುಳ್ಳಾಪುರದ ಸಿದ್ದೇಶ್, ಪ್ರದೀಪ್, ನೂರ್ ಅಹಮದ್, ಶರೀಫ್, ಥಾಮಸ್, ಶ್ರೀನಿವಾಸ ಪಿಸಾಳೆ, ಸಂಜೀವ್ ಚವ್ಹಾಣ್, ರಮೇಶ್ ಮತ್ತಿತರರು ಭಾಗವಹಿಸಿದ್ದರು.

## ಅನ್‌ಮೋಲ್ ಬಾಲಕರ ತಂಡಕ್ಕೆ ಪ್ರಥಮ, ಬಾಲಕಿಯರ ತಂಡಕ್ಕೆ ದ್ವಿತೀಯ ಸ್ಥಾನ

ಬಾಲಕರ ವಿಭಾಗದಲ್ಲಿ ಅನ್‌ಮೋಲ್ ವಿದ್ಯಾಸಂಸ್ಥೆಯ ತಂಡ ಪ್ರಥಮ ಸ್ಥಾನವನ್ನು, ಹರಿಹರದ ಯುನೈಟೆಡ್ ತಂಡ ದ್ವಿತೀಯ ಸ್ಥಾನವನ್ನು ಹಾಗೂ ಬಾಲಕಿಯರ ವಿಭಾಗದಲ್ಲಿ ರಾಣೇಬೆನ್ನೂರಿನ ಯುನೈಟೆಡ್ ತಂಡ ಪ್ರಥಮ, ದಾವಣಗೆರೆ ಅನ್‌ಮೋಲ್ ತಂಡ ದ್ವಿತೀಯ ಸ್ಥಾನ ಪಡೆದು ಕೊಂಡವು.

# ಮನಸ್ಸುಗಳ ಕೂಡಿಸುವ ಶಿವಸಿಂಪಿ ಸಮಾಜ

## ಶ್ರೀ ಶಿವದಾಸಿಮಯ್ಯ ಜಯಂತ್ಯುತ್ಸವದಲ್ಲಿ ಶ್ರೀ ಸಿದ್ಧಲಿಂಗ ಸ್ವಾಮೀಜಿ ಬಣ್ಣನೆ



ದಾವಣಗೆರೆ, ಆ. 13- ಶಿವಸಿಂಪಿ ಸಮಾಜವು ಕೇವಲ ಬಟ್ಟೆ ಹೊಲಿಯುವುದು ಮಾತ್ರವಲ್ಲದೇ ಸಮಾಜದ ಮನಸ್ಸುಗಳನ್ನು ಹೊಲಿಯುವ (ಕೂಡಿಸುವ) ಕೆಲಸವನ್ನು ಸಹ ಮಾಡುತ್ತಿದೆ ಎಂದು ತುಮಕೂರು ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗಸ್ವಾಮಿಗಳು ಹೇಳಿದರು.

ನಗರದ ಹೊರ ವಲಯದ ಬಾಡಾ ಕ್ರಾಸ್ ಬಳಿ ಇರುವ ಶಂಕರಲೀಲಾ ಕನ್ವೆನ್ಷನ್ ಹಾಲ್ ನಲ್ಲಿ ದಾವಣಗೆರೆ ಜಿಲ್ಲಾ ಶಿವಸಿಂಪಿ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ದಾವಣಗೆರೆ ಜಿಲ್ಲಾ ಶಿವಸಿಂಪಿ ಸಮಾವೇಶ, ಕುಲಗುರು ಶರಣ ಶ್ರೀ ಶಿವದಾಸಿಮಯ್ಯ ಜಯಂತ್ಯುತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಶಿವಸಿಂಪಿ ಸಮಾಜಕ್ಕೆ ತನ್ನದೇ ಆದ ಬಹುದೊಡ್ಡ ಹಿನ್ನೆಲೆ ಇದೆ. ಕೊಡುವ ಸಮಾಜವೇ ಹೊರತು ಬೇಡುವ ಸಮಾಜವಲ್ಲ. ಸಂಸ್ಕಾರವಂತ, ಆಚಾರವಂತ, ಪೂಜಾನಿಷ್ಠ, ಶರಣರ ಮಾರ್ಗದರ್ಶನದಲ್ಲಿ ಶಿಸ್ತುಬದ್ಧ ಜೀವನ ನಡೆಸುವ ಸಮಾಜವಾಗಿದೆ ಎಂದರು.

ಕುಲಕಸುಬಿಗಾಗಿ ಬಳಸುವ ಸೂಜಿ ಮತ್ತು ದಾರದಿಂದ ಕೇವಲ ಬಟ್ಟೆಯನ್ನಷ್ಟೇ ಹೊಲೆಯುವುದಲ್ಲ. ಬದಲಾಗಿ ಸಮಾಜ ಹಾಗೂ ಹೃದಯವನ್ನು ಬೆಸೆಯುವ ಮಹತ್ತರ ಕೆಲಸವನ್ನು ಶಿವಸಿಂಪಿ ಸಮಾಜ ಮಾಡುತ್ತಾ ಬಂದಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದ ಸಮಾಜ ಸಂಘಟಿವಾಗಿ ಸರ್ಕಾರಿ ಸವಲತ್ತುಗಳನ್ನು ಪಡೆಯಲು ಮುಂದಾಗಬೇಕೆಂದು ಕರೆ ನೀಡಿದರು.

ಕೇವಲ ಇನ್ನೊಬ್ಬರನ್ನು ಅವಲಂಬನೆ ಮಾಡುವ ಜೀವನ ಆಗದೇ ಸ್ವಾವಲಂಬಿ ಬದುಕು ನಮ್ಮದಾಗಬೇಕು. ಸಮಾಜಕ್ಕೆ ಕೊಡುಗೆ ನೀಡುವ ಬಗ್ಗೆ ಚಿಂತನೆ ನಡೆಸಬೇಕಾಗಿದೆ ಎಂದರು.

ಸಮಾಜ ಬದಲಾವಣೆಗೆ ಶಿಕ್ಷಣವೇ ದೊಡ್ಡ ಶಕ್ತಿ. ಜ್ಞಾನಕ್ಕೆ ಅತ್ಯಂತ ಮಹತ್ವವಿದೆ. ಸಮಾಜದಲ್ಲಿ ಜ್ಞಾನಿಗಳನ್ನು ಗೌರವದಿಂದ ಕಾಣುತ್ತಾರೆ. ಮಕ್ಕಳನ್ನು ಕೇವಲ ಪ್ರತಿಭಾವಂತರನ್ನಾಗಿ ಮಾಡದೇ ಗುಣವಂತರನ್ನಾಗಿ ಮಾಡುವ ಅಗತ್ಯವಿದೆ ಎಂದು ಹೇಳಿದರು.

ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳಿಸಬೇಕಾಗಿದೆ. ಸಂಸ್ಕಾರ ಕಲಿಸಬೇಕಾಗಿದೆ ಎಂದರು.

**ಸಂಘಟನೆಯಾಗುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಶಿವಸಿಂಪಿ ಸಮಾಜ ಬರಬೇಕಾಗಿದೆ. ಸಂಘಟನಾ ಶಕ್ತಿಯಿಂದ ಸರ್ಕಾರದಿಂದ ಸವಲತ್ತು ಪಡೆಯಲು ಸಾಧ್ಯ. ಸಮಾಜದ ಹೋರಾಟದಲ್ಲಿ ಶ್ರೀಮಠ ಬೆಂಬಲವಾಗಿ ನಿಲ್ಲಲಿದೆ. 2ಎ ಮೀಸಲಾತಿ ಹೋರಾಟದಲ್ಲೂ ನಿಮ್ಮ ಜೊತೆ ಇರುತ್ತೇವೆ.**

**- ಶ್ರೀ ಬಸವಪ್ರಭು ಸ್ವಾಮೀಜಿ**

ಹನ್ನೆರಡನೇ ಶತಮಾನದ ಕ್ರಾಂತಿಯ ಕಿಡಿ, ಶ್ರೇಷ್ಠ ಶರಣ ಶಿವದಾಸಿಮಯ್ಯ ಬದುಕಿಗೆ ಬೇಕಾದ ಬೆಳಕು ನೀಡಿದವರು. ಬಸವಣ್ಣ ಅನುಭವ ಮಂಟಪ ರಚನೆ ಮಾಡುವ ಮೂಲಕ ಅನೇಕ ಶರಣ-ಶರಣೆಯರಿಗೆ ಸಮಾನತೆ ನೀಡುವ ಮೂಲಕ ಬಹು ಎತ್ತರಕ್ಕೆ ಕೊಂಡೊಯ್ದಿದ್ದರು. ಇಂದಿಗೂ ಶರಣರ ಅನುಭವಗಳು ನಮಗೆ ದಾರಿದೀಪವಾಗಿವೆ ಎಂದು ನುಡಿದರು.

ಶಿವದಾಸಿಮಯ್ಯ ಅವರ ಬಗ್ಗೆ ಸಂಶೋಧನೆ ನಡೆಸುವ ಮೂಲಕ ಉತ್ತಮ ಕೃತಿ ಹೊರ ತರುವ ಕೆಲಸವನ್ನು ಸಮಾಜದ ಮುಖಂಡರು ಮಾಡಬೇಕೆಂದು ಸಲಹೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಚಿತ್ರದುರ್ಗ ಬೃಹನ್ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಸಮಾಜದ ಬಗ್ಗೆ ಬಹಳ ಅಭಿಮಾನ, ಗೌರವಿದೆ. ಚಿತ್ರದುರ್ಗ ಮಠಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ನಡೆದುಕೊಳ್ಳುವವರೇ ಶಿವಸಿಂಪಿ ಸಮಾಜದ ಭಕ್ತರು. ಅವರ ಸೇವೆಯನ್ನು ಮರೆಯುವಂತಿಲ್ಲ ಎಂದರು.

ಸಮಾಜಕ್ಕೆ ಶಕ್ತಿ ಬರಬೇಕಾದರೆ ಜೇನುಗೂಡಿನಂತೆ ಸಂಘಟನೆಯಾಗಬೇಕಾಗಿದೆ. ಹೋರಾಟ ನಿರಂತರವಾಗಿರಲಿ. ಸಿಗಬೇಕಾದ ಸೌಲಭ್ಯಗಳು ಸಿಗುವಂತಾಗಲಿ ಎಂದು ಆಶಿಸಿದರು.

ಶಿವಸಿಂಪಿ ಸಮಾಜದ ಅಧ್ಯಕ್ಷ ಬೂಸ್ನೂರು ಗುರುಬಸಪ್ಪ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷ ಸಿ.ಎಲ್. ಚಂದ್ರಧರ, ಪ್ರಧಾನ ಕಾರ್ಯದರ್ಶಿ ಬೂಸ್ನೂರು ಪ್ರಕಾಶ್, ಸಹ ಕಾರ್ಯದರ್ಶಿ ಜ್ಞಾನೇಶ್ವರ ಜವಳಿ, ತುಮಕೂರು ವಿವಿ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ಎಂ. ಕೊಟ್ರೇಶ್, ಸಮಾಜದ ಮುಖಂಡರಾದ ಬಿ.ಎಂ. ಶಿವಕುಮಾರ್, ಹೆಚ್.ಕೆ. ಹೇಮಣ್ಣ, ಜಗದೀಶಪ್ಪ ಬಾವಿಕಟ್ಟೆ, ಗಂಗಾಧರ ಗಂಜಿ, ಶರಣಪ್ಪ ಚಟ್ಟೇರ, ಶಿವಶಂಕರ ಸಿಂಧಗಿ, ಶಿವಶಂಕರ್ ಜೊಳ್ಳೆ, ಡಾ. ಎಸ್.ಎಸ್. ನಾರಾಯಣಪುರ, ಮಲ್ಲಿಕಾರ್ಜುನ ಕೊಲ್ಹಾರ, ಬಳ್ಳಾರಿ ಚನ್ನವೀರಪ್ಪ, ಜಿ.ಎಸ್. ಚಾಮಶೆಟ್ಟಿ, ಧಾರವಾಡದ ಪಿ.ಎಸ್. ಕೋದನಾಪುರ, ಬೆಳಗಾವಿ ಅಶೋಕ ಆಸಂಗಿ ಸೇರಿದಂತೆ ಸಮಾಜದ ಅನೇಕ ಗಣ್ಯರು ಭಾಗವಹಿಸಿದ್ದರು.

ಅನು ಕೊಟ್ರೇಶ್ ಸಂಗಡಿಗರು ವಚನ ಸಂಗೀತ ನಡೆಸಿಕೊಟ್ಟರು. ಕೆ.ಎಸ್. ಶಾರದ ಸ್ವಾಗತ ನೃತ್ಯ ಮಾಡಿದರು. ಇದೇ ಸಂದರ್ಭದಲ್ಲಿ ಸಮಾಜದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

## ನಗರದಲ್ಲಿ ನಾಳೆ ಕಬಡ್ಡಿ ಆಯ್ಕೆ ಪ್ರಕ್ರಿಯೆ

ದಾವಣಗೆರೆ, ಆ.13- ಕರ್ನಾಟಕ ರಾಜ್ಯ ಪುರುಷರ ಕಬ್ಬಡಿ ಚಾಂಪಿಯನ್ ಶಿಪ್ ಪಂದ್ಯಾವಳಿಯು ಇದೇ ದಿನಾಂಕ 25 ರಿಂದ 27ರ ವರೆಗೆ ಮೈಸೂರಿನ ಚಾಮುಂಡಿ ವಿಹಾರ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಪಂದ್ಯಾವಳಿಗೆ ದಾವಣಗೆರೆ ಜಿಲ್ಲೆಯ ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆಯು ನಾಡಿದ್ದು ದಿನಾಂಕ 15 ರಂದು ಮಧ್ಯಾಹ್ನ 3.30 ಗಂಟೆಗೆ ಸ್ಟೇಡಿಯಂನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ದಾವಣಗೆರೆ ಜಿಲ್ಲೆಯ ಪ್ರತಿ ತಂಡದಿಂದ ನಾಲ್ಕು ಜನ ಉತ್ತಮ ಪುರುಷ ಕ್ರೀಡಾಪಟುಗಳು ಭಾಗವಹಿಸಬೇಕಾಗಿರುತ್ತದೆ. ಕ್ರೀಡಾಪಟುಗಳು ತೂಕ 85 ಕೆ.ಜಿ ಮೀರಿರಬಾರದು. ವಿವರಗಳಿಗೆ ಅಧ್ಯಕ್ಷ ಎಮ್.ನಾಗರಾಜ್ (6363118501), ಪ್ರಧಾನ ಕಾರ್ಯದರ್ಶಿ ಎಂ. ನಾರಾಯಣಸ್ವಾಮಿ (9972049306), ಕಾರ್ಯಾಧ್ಯಕ್ಷ ಹೆಚ್.ನಿಜಗುಣ (9844413151) ಅವರನ್ನು ಸಂಪರ್ಕಿಸಬಹುದು.

## ಕ್ರೀಡೆ - ವಿದ್ಯೆ ಒಂದೇ ನಾಣ್ಯದ ಎರಡು ಮುಖ : ದಿನೇಶ್ ಕೆ .ಶೆಟ್ಟಿ



ದಾವಣಗೆರೆ, ಆ. 13- ನಗರದ ಮೋತಿ ವೀರಪ್ಪ ಪ್ರೌಢಶಾಲಾ ಮೈದಾನದಲ್ಲಿ ಅಂತರ್ ಜಿಲ್ಲಾಮಟ್ಟದ ಫುಟ್ಬಾಲ್ ಪಂದ್ಯಾವಳಿ ಇಂದು ನಡೆಯಿತು. ಮಹಾನಗರ ಪಾಲಿಕೆ ಮೇಯರ್ ವಿನಾಯಕ್ ಪೈಲ್ವಾನ್ ಪಂದ್ಯಾವಳಿಗೆ ಚಾಲನೆ ನೀಡಿದರು. ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಕ್ರೀಡೆ ಮತ್ತು ವಿದ್ಯೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹಿಂದಿನ ದಿನಗಳಲ್ಲಿ ಕ್ರೀಡೆಗೆ ಹೆಚ್ಚು ಪ್ರೋತ್ಸಾಹ ಇರುತ್ತಿರಲಿಲ್ಲ. ಆದರೆ ಈಗಿನ ಪೋಷಕರು ಮಕ್ಕಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಮಕ್ಕಳು ಕ್ರೀಡೆ ಜೊತೆಗೆ ವಿದ್ಯಾಭ್ಯಾಸದ ಕಡೆ ಕೂಡ ಹೆಚ್ಚು ಗಮನ ಕೊಡಬೇಕು ಎಂದರು.

ಅಂತರ್ ಜಿಲ್ಲಾಮಟ್ಟದ ಫುಟ್ಬಾಲ್ ಪಂದ್ಯಾವಳಿಯು 16 ವರ್ಷದೊಳಗಿನ ಪಾಲಕರ ಮತ್ತು ಬಾಲಕರ ವಿಭಾಗಗಳಲ್ಲಿ ಏರ್ಪಡಿಸಿದ್ದು, ಈ ಪಂದ್ಯಾವಳಿಯಲ್ಲಿ ವಿವಿಧ ಜಿಲ್ಲೆಗಳಿಂದ 25ಕ್ಕೂ ಹೆಚ್ಚು ತಂಡಗಳು ಪಾಲ್ಗೊಂಡಿದ್ದವು ಎಂದು ಜಿಲ್ಲಾ ಫುಟ್ಬಾಲ್ ಅಸೋಸಿಯೇಷನ್ ಕಾರ್ಯದರ್ಶಿ ಗಿರೀಶ್ ತಿಳಿಸಿದರು.

ಫುಟ್ಬಾಲ್ ಅಸೋಸಿಯೇಷನ್ ಪದಾಧಿಕಾರಿಗಳಾದ ಕೃಷ್ಣ ಜಾಧವ್ ಪ್ರದೀಪ್, ಸಂಜು ಚವ್ಹಾಣ್, ತಿಮ್ಮೇಶ್, ಶ್ರೀನಿವಾಸ್ ಮುಂತಾದವರಿದ್ದರು.

## ರೆಡ್ ಕ್ರಾಸ್‌ನಿಂದ ರಕ್ತದಾನ ಶಿಬಿರ



ದಾವಣಗೆರೆ, ಆ. 13- ನಗರದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಸಹಯೋಗದಲ್ಲಿ ರಾಘವೇಂದ್ರ ಕಾಲೇಜು ವತಿಯಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಕಾಲೇಜಿನ ಮ್ಯಾನೇಜಿಂಗ್ ಡೈರೆಕ್ಟರ್ ಮಂಜುಷಾ ಸೈಮನ್ ಹಾಗೂ ಪ್ರಾಂಶುಪಾಲ ಬಿ.ಎಫ್. ಹಿರೇಮಠ್, ರೆಡ್ ಕ್ರಾಸ್ ಸಂಸ್ಥೆಯ ಸಂಯೋಜಕರಾದ ಎನ್.ಜಿ.ಶಿವಕುಮಾರ್, ವಿನಾಯಕ, ಜ್ಯೋತಿ, ಗಿರೀಶ್, ಪದ್ಮ ಇತರರಿದ್ದರು.

## ಓದುಗರ ಪತ್ರ

### ಆಗಸ್ಟ್ 15 ರಂದು ಹದಡಿ ರಸ್ತೆಯಲ್ಲಿ ವಾಹನ ಮಾರ್ಗ ಬದಲಿಸಿ

**ಮಾನ್ಯರೇ,**

ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ಆಯೋಜನೆಯಾಗಿರುತ್ತದೆ. ಶಾಲಾ- ಕಾಲೇಜಿನ ಮಕ್ಕಳು ನಗರದ ವಿವಿಧ ಭಾಗಗಳಿಂದ ಕ್ರೀಡಾಂಗಣದ ಪೂರ್ವ ಮತ್ತು ಉತ್ತರ ಗೇಟಿನಿಂದ ಒಳ ಬರುತ್ತಾರೆ. ಹದಡಿ ರಸ್ತೆಯಲ್ಲಿ ವಾಹನಗಳ ಓಡಾಟ ಹೆಚ್ಚಾಗಿದ್ದು ರಸ್ತೆ ದಾಟುವ ಮಕ್ಕಳಿಗೆ ಅಪಾಯ ಕಟ್ಟಿಟ್ಟ ಬುತ್ತಿ. ಕಾರ್ಯಕ್ರಮ ಪ್ರಾರಂಭವಾಗುವ ವೇಳೆಯಿಂದ ಮುಕ್ತಾಯವಾಗುವವರೆಗೆ ಹದಡಿ ರಸ್ತೆಯಲ್ಲಿ ಸಂಚರಿಸುವ ವಾಹನ ಮಾರ್ಗ ಬದಲಿಸಿದರೆ ಮಕ್ಕಳು ಅಪಾಯ ರಹಿತವಾಗಿ ಓಡಾಡಬಹುದು. ಜೊತೆಗೆ ಸುಗಮ ಸಂಚಾರ ಮತ್ತು ಜನಸಂದಣಿ ನಿಯಂತ್ರಿಸಲು ಪೊಲೀಸ್ ವ್ಯವಸ್ಥೆಯೂ ಆಗಬೇಕು.

ಸ್ಟೇಡಿಯಂ ಸೌಂಡ್ ಸಿಸ್ಟಂ ಕೊನೆಯಲ್ಲಿರುವವರಿಗೆ ತಲುಪುವುದಿಲ್ಲ. ಸ್ಟೇಡಿಯಂನಲ್ಲಿ ಕಾರ್ಯಕ್ರಮ ಕೊಡಲು ಬರುವ ಮಕ್ಕಳಿಗೆ ನಿರೂಪಕರ ಮಾತು ಕೇಳಿಸುವುದಿಲ್ಲ. ಕ್ರೀಡಾಂಗಣದ ಸುತ್ತಲೂ ಕುಳಿತ ವೀಕ್ಷಕರಿಗೆ ಧ್ವನಿ ತಲುಪುವುದಿಲ್ಲ. ಈ ನ್ಯೂನತೆ ಸರಿಪಡಿಸಿ ಧ್ವನಿವರ್ಧಕದ ಸಾಮರ್ಥ್ಯ ಹೆಚ್ಚು ಮಾಡಿ ಎಲ್ಲರಿಗೂ ಕೇಳುವಂತೆ ವ್ಯವಸ್ಥೆ ಮಾಡಲು ಸಂಬಂಧಪಟ್ಟವರಲ್ಲಿ ವಿನಂತಿಸುತ್ತೇನೆ. ಬಾಯಾರಿದ ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ಸೌಕರ್ಯವಿರುವಂತೆ ನೋಡಿಕೊಳ್ಳಲು ಮನವಿ.

**- ಡಿ. ಎಸ್. ಹೇಮಂತ್**, ಕಾರ್ಯದರ್ಶಿ, ಸಿದ್ಧಗಂಗಾ ವಿದ್ಯಾಸಂಸ್ಥೆ.

## ವಿಶ್ವ ಛಾಯಾಗ್ರಹಣ ದಿನಾಚರಣೆ ಪ್ರಚಾರ ಕಾರ್ಯಕ್ಕೆ ಶ್ರೀಗಳ ಚಾಲನೆ

ದಾವಣಗೆರೆ, ಆ. 13 - ಫೋಟೋಗ್ರಾಫರ್ ಯೂತ್ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ವಿಶ್ವ ಛಾಯಾಗ್ರಹಣ ದಿನಾಚರಣೆಯ ಪ್ರಯುಕ್ತ ನೂರಾರು ವರ್ಷಗಳ ಹಳೆಯ ಕ್ಯಾಮರಾಗಳ ಪ್ರದರ್ಶನವನ್ನು ಇದೇ ದಿನಾಂಕ 18 ಮತ್ತು 19ರಂದು ನಗರದ ಗುರುಭವನದಲ್ಲಿ ಏರ್ಪಡಿಸಲಾಗಿದೆ. ಅದಕ್ಕೆ ಪೂರಕವಾಗಿ ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರ ಸೋಮೇಶ್ವರ ಮಹಾಸ್ವಾಮಿಜಿ ಇಂದು ಪ್ರಚಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ದಾವಣಗೆರೆ ತಾಲ್ಲೂಕು ಫೋಟೋಗ್ರಾಫರ್ ಯೂತ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಶ್ರೀನಾಥ್ ಅಗಡಿ, ಜಿಲ್ಲಾಧ್ಯಕ್ಷ ವಿಜಯಕುಮಾರ್ ಹಾಗೂ ತಾಲ್ಲೂಕು ಉಪಾಧ್ಯಕ್ಷ ತಿಪ್ಪೇಸ್ವಾಮಿ ಎಸ್. ಆರ್.ಎಚ್.ಕೆ.ಸಿ. ರಾಜು, ಖಜಾಂಚಿ ಮಲ್ಲಿಕಾರ್ಜುನ್, ಕೆ.ಪಿ. ನಾಗರಾಜ್ ಸಹ ಕಾರ್ಯದರ್ಶಿ ಅರುಣ ಬಿ.ಪಿ., ತಿಲಕ್ ಅರುಣ್ ಬಾಸಿಂಗ, ಕಿರಣ್ ಕುಮಾರ್, ಪಂಚಾಕ್ಷರಯ್ಯ, ರುದ್ರಮ್ಮ, ಮಂಗಳಮ್ಮ, ಪ್ರಕಾಶ ಹಾಗೂ ಮಾಜಿ ಜಿಲ್ಲಾಧ್ಯಕ್ಷ ಶಂಭು, ನಿರ್ದೇಶಕ ಮಂದಾರ ಬಸವರಾಜ್, ಮಿಥುನ್, ಕಿಶೋರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



## ಕವಿಗಳು ಮಾತನಾಡಬಾರದು ಕವಿತೆಗಳು ಮಾತನಾಡಬೇಕು : ವೀರಭದ್ರಪ್ಪ ತೆಲಗಿ




ದಾವಣಗೆರೆ, ಆ. 13 - ಕವಿಗಳು ಮಾತನಾಡಬಾರದು, ಕವಿತೆಗಳು ಮಾತನಾಡಬೇಕು. ಕವಿ ಎಂದರೆ ಕಂಡದ್ದನ್ನೆಲ್ಲ ವಿಮರ್ಶೆ ಮಾಡುವವ. ಕಾವ್ಯ ಅತ್ಯಂತ ಶಕ್ತಿಶಾಲಿ ಮಾಧ್ಯಮ ಎಂದು ಹಿರಿಯ ಸಾಹಿತಿ ವೀರಭದ್ರಪ್ಪ ತೆಲಗಿ ಪ್ರತಿಪಾದಿಸಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಜಿಲ್ಲಾ ಸಮಿತಿ ವತಿಯಿಂದ ಸ್ಥಳೀಯ ವಿನೋಬ ನಗರದ ಜ.ಜ.ಮು. ಪ್ರೌಢಶಾಲೆಯಲ್ಲಿ ಇಂದು ಹಮ್ಮಿಕೊಂಡಿದ್ದ 'ತುಂಗಭದ್ರೆ' ಶೀರ್ಷಿಕೆಯಡಿ ಕವಿಗೋಷ್ಠಿಯಲ್ಲಿ ಅವರು ಸುಮಾರು 20ಕ್ಕೂ ಹೆಚ್ಚು ಕವಿಗಳ ಕವಿತೆಗಳ ಕುರಿತು ಮನೋಜ್ಞವಾಗಿ ಮಾತನಾಡಿದರು.

ಪ್ರಾಸ್ತಾವಿಕ ನುಡಿಗಳನ್ನು ಕಾರ್ಯದರ್ಶಿ ಪ್ರಶಾಂತ್ ಕೋಲ್ಕುಂಟೆ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ನಡೆದು ಬಂದ ದಾರಿಯ ಪಕ್ಷಿನೋಟವನ್ನು ತಿಳಿಸಿದರು.

ದಾವಣಗೆರೆ ಘಟಕದ ಸಂಚಾಲಕ ಅಣಬೇರು ತಾರೇಶ್ ಸ್ವಾಗತಿಸಿದರು. ಕವಯತ್ರಿ ಉಮಾದೇವಿ ಪ್ರಾರ್ಥಿಸಿದರು. ತಾಲ್ಲೂಕು ಕಾರ್ಯದರ್ಶಿ ಪಂಚಾಕ್ಷರಯ್ಯ ವಂದಿಸಿದರು. ಮಾಧ್ಯಮ ಸಂಪರ್ಕ ಪ್ರಮುಖರಾದ ಶ್ರೀಮತಿ ಸುನೀತಾ ಪ್ರಕಾಶ್ ನಿರೂಪಿಸಿದರು. ಜಿಲ್ಲಾ ಸಹ ಸಂಯೋಜಕ ಅಮರೇಶ, ಶಿಕ್ಷಕ ರುದ್ರೇಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಪ್ಲಾಸ್ಟಿಕ್ ಮುಕ್ತ ನಗರ ಪರಿವರ್ತನೆಗಾಗಿ ಜಾಗೃತಿ






ದಾವಣಗೆರೆ, ಆ. 13 - ಮಹಾನಗರ ಪಾಲಿಕೆ ವತಿಯಿಂದ ನಗರವನ್ನು ಸ್ವಚ್ಛ, ಸುಸ್ಥಿರ ಹಾಗೂ ಪ್ಲಾಸ್ಟಿಕ್ ಮುಕ್ತ ನಗರವನ್ನಾಗಿ ಪರಿವರ್ತಿಸಲು ಕೈಜೋಡಿಸುವ ಕುರಿತು, ಉದ್ದಿಮೆದಾರರು ತಮ್ಮ ಉದ್ದಿಮೆಯಲ್ಲಿ ಸಂಪೂರ್ಣ ಪ್ಲಾಸ್ಟಿಕ್ ನಿಷೇಧ ಪದ್ಧತಿಯನ್ನು ಅನುಸರಿಸಲು ಕ್ರಮ ಕೈಗೊಂಡು, ತಮ್ಮ ಗ್ರಾಹಕರಿಗೂ ಜಾಗೃತಿಯನ್ನು ಮೂಡಿಸುತ್ತಾ, ಪ್ಲಾಸ್ಟಿಕ್ ಕವರ್ ಬದಲು, ಬಟ್ಟೆ ಹಾಗೂ ಮರುಬಳಕೆಯ ಪೇಪರ್ ನಿರ್ಮಿತ ಚೀಲವನ್ನು ಬಳಸಲು ಮನವಿ ಮಾಡಲಾಯಿತು.

ಕಾರ್ಯಕ್ರಮದಲ್ಲಿ 24 ನೇ ವಾರ್ಡಿನ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, 22 ನೇ ವಾರ್ಡಿನ ಸದಸ್ಯ ಶಿವಾನಂದ, ಪಾಲಿಕೆಯ ಆರೋಗ್ಯ ಅಧಿಕಾರಿ ನಿಖಿಲ್ ಮತ್ತು ಇತರರು ಉಪಸ್ಥಿತರಿದ್ದರು.

24 ನೇ ವಾರ್ಡಿನ ಅವಾಂತರ, ಸ್ಟೈಲ್ ಯೂನಿಯನ್ ಅನೇಕ ಮಳಿಗೆಗಳು ಅಭಿಯಾನದಲ್ಲಿ ಪಾಲ್ಗೊಂಡಿದ್ದು, ಅವರಿಗೆ ಪ್ರಶಂಸನಾ ಪತ್ರ ನೀಡಲಾಯಿತು.

## ಜಿಲ್ಲಾ ಕಾಂಗ್ರೆಸ್‌ನಿಂದ ಸ್ವಾತಂತ್ರ್ಯೋತ್ಸವ

ದಾವಣಗೆರೆ,ಆ.13- ನಗರದ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ (ಡಾ. ಶಾಮನೂರು ಶಿವಶಂಕರಪ್ಪ ಭವನ) ನಾಡಿದ್ದು ದಿನಾಂಕ 15ರ ಮಂಗಳವಾರ ಬೆಳಿಗ್ಗೆ 8 ಗಂಟೆಗೆ 77ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಗುವುದು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಧ್ವಜಾರೋಹಣ ನೆರವೇರಿಸುವರು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ದಿನೇಶ್ ಶೆಟ್ಟಿ ತಿಳಿಸಿದ್ದಾರೆ.


## ಭಕ್ತಿಪೂರ್ವಕ ಕೃತಜ್ಞತೆಗಳು



ದಾವಣಗೆರೆಯ ಶ್ರೀ ಅಭಿನವ ರೇಣುಕ ಮಂದಿರದಲ್ಲಿ ಆ. 9 ರಿಂದ 13 ರವರೆಗೆ **ಇಷ್ಟಲಿಂಗ ಮಹಾ ಪೂಜೆ ಮತ್ತು ಧರ್ಮ ಜನ ಜಾಗೃತಿ ಸಮಾರಂಭ**ವನ್ನು ಯಶಸ್ವಿಯಾಗಿ ನಡೆಸಿಕೊಟ್ಟ **ಶ್ರೀ ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಮಹಾಸ್ವಾಮಿಗಳಿಗೆ ಭಕ್ತಿಪೂರ್ವಕ ಕೃತಜ್ಞತೆಗಳು.**



## ಜನ್ಮ ದಿನದ ಶುಭಾಶಯಗಳು









ದಿನಾಂಕ 14.08.2023ರಂದು ತಮ್ಮ ಹುಟ್ಟು ಹಬ್ಬದ ಸಂಭ್ರಮದಲ್ಲಿರುವ

**ನೂರುಲ್ಲಾ**

ಅವರಿಗೆ ಜನ್ಮ ದಿನದ ಶುಭಾಶಯಗಳು.

**ಶುಭ ಕೋರುವವರು**

**ಎಸ್.ಪಿ. ಹನುಮಂತರಾಜ್ (ಪಾಪಣ್ಣಿ)**

28ನೇ ವಾರ್ಡ್, ಕಾಂಗ್ರೆಸ್ ಅಧ್ಯಕ್ಷರು, ದಾವಣಗೆರೆ.



# ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಆದರ್ಶಗಳೇ ದಾರಿದೀಪ : ರಂಭಾಪುರಿ ಶ್ರೀ




ದಾವಣಗೆರೆ, ಆ.13- ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಸುಭದ್ರ ಸಮಾಜ ಕಟ್ಟಲು ಆದರ್ಶಗಳೇ ದಾರಿದೀಪ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರ ಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ನಗರದ ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಮಂಗಲ ಭವನದಲ್ಲಿ ಜರುಗಿದ ಇಷ್ಟಲಿಂಗ ಮಹಾಪೂಜೆ ಹಾಗೂ ಜನ ಜಾಗೃತಿ ಧರ್ಮ ಸಮಾವೇಶದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಉದಾತ್ತ ಜೀವನ ಮೌಲ್ಯಗಳನ್ನು ಸಂಪಾದಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವುದೇ ನಿಜವಾದ ಧರ್ಮ. ಸಂವೇದನಾಶೀಲ ಜೀವನಕ್ಕೆ ವೀರಶೈವ ಧರ್ಮ ಕೊಟ್ಟ ಕೊಡುಗೆ ಅಮೋಘ. ಶಿಕ್ಷಣ ಆರೋಗ್ಯ ಮತ್ತು ಅಭಿವೃದ್ಧಿ ವಿಚಾರಗಳಲ್ಲಿ ರಾಜಕೀಯ ಪ್ರವೇಶ ಒಳ್ಳೆಯದಲ್ಲ ಎಂದು ಹೇಳಿದರು.

ನೀರಿಲ್ಲದ ನದಿ, ಅತಿಥಿಯಿಲ್ಲದ ಮನೆ, ಫಲವಿಲ್ಲದ ವೃಕ್ಷ ಹೇಗೆ ವ್ಯರ್ಥವೋ ಹಾಗೆಯೇ ಜೀವನದಲ್ಲಿ ಗುರು ಮತ್ತು ಗುರಿ ಇಲ್ಲದಿದ್ದರೆ ಬಾಳು ನಿರರ್ಥಕವಾಗುವುದೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಧರ್ಮದ ಸಂವಿಧಾನದಲ್ಲಿ ನಿರೂಪಿಸಿದ್ದಾರೆ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ವೀರಶೈವ ಧರ್ಮ ವೃಕ್ಷ ಬೇರಾದರೆ ಶಿವಶರಣರು ಆ ವೃಕ್ಷದ ಹೂ ಹಣ್ಣು ಇದ್ದಂತೆ. ಸಮನ್ವಯ ಚಿಂತನೆಗಳಿಂದ ಸಮಾಜ ಸುಭದ್ರಗೊಳ್ಳಬೇಕಾಗಿದೆ ಎಂದರು.

ಕುವೆಂಪು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಗದುಗಿನ ಡಾ|| ಗುರುಸ್ವಾಮಿ ಕಲಕೇರಿ ಅವರಿಗೆ 'ಸ್ವರ ಸಾಹಿತ್ಯ ಸಂಜೀವಿನಿ' ವಿಶೇಷ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಅಮೂಲ್ಯ ಸೇವೆ ಸಲ್ಲಿಸಿದ ಜಿ.ಎಸ್.ಅನಿತ್ ಕುಮಾರ್ ಅವರಿಗೆ 'ಶಿಕ್ಷಣ ಸೇವಾ ಧುರೀಣ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಣ್ವಕುಪ್ಪಿ ಗವಿಮಠದ ಡಾ.ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಖಾದಿ ಖಾಕಿ ಮತ್ತು ಖಾವಿ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿದರೆ ಸರ್ವಾಂಗೀಣ ಅಭಿವೃದ್ಧಿಯಾಗಲು ಸಾಧ್ಯವಾಗುವುದು ಎಂದರು.

ನೇತೃತ್ವ ವಹಿಸಿದ ಬಂಕಾಪುರದ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಜಿಡ್ಡುಗಟ್ಟಿದ ಭಾವನೆಗಳನ್ನು ಕಳೆದು ಸಾತ್ವಿಕ ನೆಲೆಗಟ್ಟಿನ ಮೇಲೆ ಬೆಳೆಯುವ ಜನ ಸಮುದಾಯದಲ್ಲಿ ಅಧ್ಯಾತ್ಮ ತತ್ವಗಳ ಮೂಲಕ ಸಾಮರಸ್ಯ ಸದ್ಭಾವನೆಗಳನ್ನು ಬೆಳೆಸುವುದೇ ಗುರು ಪೀಠಗಳ ಗುರಿಯಾಗಿದೆ ಎಂದರು. ಮಳಲಿ ಮಠದ ಡಾ.ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಲೋಕಸಭಾ ಸದಸ್ಯ ಜಿ.ಎಂ.ಸಿದ್ಧೇಶ್ವರ ಮಾತನಾಡಿ, ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಘೋಷವಾಕ್ಯವಿದ್ದರೆ ಅದು ಪಂಚಾಚಾರ್ಯ ಪರಂಪರೆಯಲ್ಲಿ ಮಾತ್ರ ಎಂದು ಹೇಳಿದರು.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಂಚರಿಸುವ ರಂಭಾಪುರಿ ಶ್ರೀಗಳು ಜನರಿಗೆ ಮಾರ್ಗದರ್ಶನ ಮಾಡುತ್ತಾ, ಧರ್ಮ ಜಾಗೃತಿ ಮೂಡಿಸುತ್ತಿದ್ದಾರೆ. ಇಷ್ಟಲಿಂಗ ಪೂಜೆಯ ಮಹತ್ವ ಸಾರುತ್ತಿರುವುದು ಶ್ಲಾಘನೀಯ ಕಾರ್ಯ. ಶ್ರೀಗಳ ಮಾರ್ಗದರ್ಶನದಲ್ಲಿ ತಾವು ಕೆಲಸ ಮಾಡುವುದಾಗಿ ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪ, ಜೆ.ಡಿ.ಎಸ್. ಜಿಲ್ಲಾಧ್ಯಕ್ಷ ಬಿ.ಚಿದಾನಂದಪ್ಪ, ಅಖಿಲ ಭಾರತ ವೀರಶೈವ ಮಹಾಸಭಾ ದಾವಣಗೆರೆ ಘಟಕದ ಅಧ್ಯಕ್ಷ ಜಿ.ಶಿವಯೋಗಪ್ಪ ಹಾಗೂ ಎಸ್.ಜೆ.ವಿ.ಪಿ. ವಿದ್ಯಾಪೀಠದ ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ, ಐಗೂರು ಚಂದ್ರಶೇಖರ್, ಕವಿತ ಕೊಟ್ರೇಶ್ ಡಿ.ಕೆ.ಎಂ., ಟಿ.ಎಸ್.ಎಸ್. ಸ್ವಾಮಿ, ಶ್ವೇತ ಶಂಭಣ್ಣ, ರಂಜಿತಾ ಶಶಿಧರ, ಗೀತಮ್ಮ ಹನುಮಂತಪ್ಪ, ಪರಮೇಶ್, ಮಲ್ನಾಡ ಪ್ರಭಾಕರ ಶೆಟ್ಟರು, ಡಿ.ಈಶ್ವರ ಅವರು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರು ರಕ್ಷೆ ಸ್ವೀಕರಿಸಿದರು.

ಕಾರ್ಯಕ್ರಮದ ಸಂಘಟಕರಾದ ದೇವರಮನೆ ಶಿವಕುಮಾರ ಮತ್ತು ಶಿವರಾಜ ಅವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಶಾಲು ಹೊದಿಸಿ ಸನ್ಮಾನಿಸಿ, ಗುರು ರಕ್ಷೆ ನೀಡಿ ಆಶೀರ್ವದಿಸಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲದ ಸಾಧಕರಿಂದ ವೇದಘೋಷ ಹರಿಹರದ ಕಾಂತರಾಜ ಮತ್ತು ವೀರೇಶ್ ಬಡಿಗೇರ ಅವರಿಂದ ಸಂಗೀತ ಜರುಗಿತು. ಟಿ.ಜಿ.ಸುರೇಶ ಸ್ವಾಗತಿಸಿದರು. ಎಂ.ಎಸ್. ಕೊಟ್ರಯ್ಯ ಜಗದ್ಗುರುಗಳಿಗೆ ಗೌರವ ಮಾಲಾರ್ಪಣೆ ಸಲ್ಲಿಸಿದರು. ಶುಭ ಐನಹಳ್ಳಿ ನಿರೂಪಿಸಿದರು.

# ದಾವಣಗೆರೆ ಕ್ಲಬ್ 'ಫ್ಯಾಮಿಲಿ ಕ್ಲಬ್' ಆಗಲಿ: ಎಸ್ಸೆಸ್ಸೆಂ



ದಾವಣಗೆರೆ, ಆ. 13- ನಗರದ ಪ್ರತಿಷ್ಠಿತ ದಾವಣಗೆರೆ ಕ್ಲಬ್‌ನಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಡೈನಿಂಗ್ ಹಾಲ್, ದ್ವಿಚಕ್ರ ವಾಹನ ನಿಲ್ದಾಣ ಹಾಗೂ ಹೊಸ ಉಲ್ಲಾಸ ಕಾಮಗಾರಿಗಳನ್ನು ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಇಂದು ಸಂಜೆ ಉದ್ಘಾಟಿಸಿದರು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಸಚಿವ ಮಲ್ಲಿಕಾರ್ಜುನ್, 'ದಾವಣಗೆರೆ ಕ್ಲಬ್ ಮುಂದಿನ ದಿನಗಳಲ್ಲಿ ಫ್ಯಾಮಿಲಿ ಕ್ಲಬ್ ಆಗಲಿ' ಎಂದು ಆಶಿಸಿದರು.

ಬೆಳಿಗ್ಗೆಯಿಂದ ಸಂಜೆ ವರೆಗೆ ವ್ಯಾಪಾರ ವಹಿವಾಟು ನಡೆಸುವ ಅನೇಕ ಹಿರಿಯರು ಈ ಕ್ಲಬ್‌ಗೆ ಬಂದು ಮಾನಸಿಕ ನೆಮ್ಮದಿ, ಮನರಂಜನೆ ಪಡೆಯುತ್ತಾರೆ. ಕೇವಲ ಪುರುಷರು ಮಾತ್ರ ಇಲ್ಲಿಗೆ ಬರುತ್ತಾರೆ. ಬೆಂಗಳೂರಿನಲ್ಲಿರುವ ಕ್ಲಬ್‌ಗಳ ಮಾದರಿಯಲ್ಲಿ ಸದಸ್ಯರ ಪತ್ನಿಯರೂ ಆಗಮಿಸುವಂತಾಗಲಿ. ಈ ಬಗ್ಗೆ ಆಡಳಿತ ಮಂಡಳಿ ಚಿಂತಿಸಲಿ ಎಂದು ಹೇಳಿದರು.

ಕ್ಲಬ್ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದ ಸಚಿವರು, ಹೆಚ್ಚಿನ ಜಾಗ ಬೇಕಾದರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾ ರದಿಂದ ಕೊಡಿಸಲಾಗುವುದು. ಈಜುಕೊಳ ಸೇರಿದಂತೆ ವಿವಿಧ ಸೌಲಭ್ಯಗಳನ್ನೊಳಗೊಂಡು ಬೃಹತ್ ಮಟ್ಟದಲ್ಲಿ ಕ್ಲಬ್ ಅಭಿವೃದ್ಧಿಯಾಗಲಿ ಎಂದು ಹೇಳಿದರು.

ಶಾಮನೂರು ಶಿವಶಂಕರಪ್ಪ ಮಾತನಾಡಿ, ಕ್ಲಬ್‌ಗೆ ಡೈನಿಂಗ್ ಹಾಲ್ ಅಗತ್ಯತೆ ಹೆಚ್ಚಾಗಿತ್ತು. ಇದೀಗ ಸುಂದರವಾಗಿ ನಿರ್ಮಾಣವಾಗಿದೆ. ಅಲ್ಲದೇ, ದ್ವಿಚಕ್ರ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಯನ್ನೂ ಸಹ ಸುಂದರವಾಗಿ ನಿರ್ಮಿ ಸಲಾಗಿದೆ ಎಂದು ಶ್ಲಾಘಿಸಿದರು.

ದಿನಪೂರ್ತಿ ಶ್ರಮ ವಹಿಸಿ ದುಡಿದು ಬರುವವರಿಗೆ ಸಂಜೆ ವೇಳೆ ವಿಶ್ರಾಂತಿ ಬೇಕು. ಅದಕ್ಕಾಗಿ ಇಂತಹ ಕ್ಲಬ್‌ಗಳ ಅಗತ್ಯವಿದೆ ಎಂದು ಪ್ರತಿಪಾದಿಸುತ್ತಾ, ಕ್ಲಬ್‌ನಿಂದ ಮನೆಗೆ ತೆರಳಿದ ಮೇಲೆ ಕುಟುಂಬದವ ರೊಂದಿಗೆ ಜಗಳವಾಡದೆ ಪ್ರೀತಿಯಿಂದ ಇರುವಂತೆಯೂ ಸದಸ್ಯರಿಗೆ ಕಿವಿ ಮಾತು ಹೇಳಿದರು.

ಹಿರಿಯ ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ ಮಾತನಾಡಿ, ಕ್ಲಬ್‌ಗೆ ಸೇರಿದ ಮಳಿಗೆಗಳ ಮೇಲೆ ಕಟ್ಟಡ ನಿರ್ಮಿಸಿ ಮತ್ತಷ್ಟು ಆದಾಯ ಪಡೆಯಬಹುದಾಗಿದೆ. 580 ಸದಸ್ಯರಿದ್ದು, ಕೆಲವರು ಮಾತ್ರ ಕ್ಲಬ್‌ಗೆ ಆಗಮಿಸುತ್ತಾರೆ. ಕ್ಲಬ್‌ಗೆ ಬರುವವರ ಸಂಖ್ಯೆ ಹೆಚ್ಚಾಗಲಿ ಎಂದರು.

ದಾವಣಗೆರೆ ಕ್ಲಬ್ ಅಧ್ಯಕ್ಷ ಎ.ಬಿ. ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಕ್ಲಬ್ ಖಜಾಂಚಿ ಲಿಂಗರಾಜ ವಾಲಿ ಹೆಚ್.ಸಿ., ಮಾಜಿ ಅಧ್ಯಕ್ಷ ಎಸ್.ಕೆ. ವೀರಣ್ಣ, ನಿರ್ದೇಶಕರುಗಳಾದ ಬೆಳ್ಳೂಡಿ ಸದಾನಂದ, ರುದ್ರೇಶ್ ಹೆಚ್.ವಿ., ಅಭಿಷೇಕ್ ಬೇತೂರು, ಬಾದಾಮಿ ಮಲ್ಲಿಕಾರ್ಜುನ್, ತಿಮ್ಮರಾಜ ಗುಪ್ತಾ ಎಸ್.ಕೆ. ಉಪಸ್ಥಿತರಿದ್ದರು.

ಗೌರವ ಕಾರ್ಯದರ್ಶಿ ರವಿಶಂಕರ್ ಪಲ್ಲಾಗಟ್ಟೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಜಯ್ ನಾರಾಯಣ್ ಪ್ರಾರ್ಥಿಸಿ, ಕಾರ್ಯಕ್ರಮ ನಿರೂಪಿಸಿದರು. ಸಹ ಕಾರ್ಯದರ್ಶಿ ಎಸ್.ಜಿ. ಉಳುವಯ್ಯ ಸ್ವಾಗತಿಸಿದರು. ನಿರ್ದೇಶಕ ಎಸ್.ಕೆ. ಪ್ರಶಾಂತ್ ಗುಪ್ತಾ ವಂದಿಸಿದರು.

## 5 ಸಾವಿರ ಕೊಟ್ಟು ಸದಸ್ಯನಾಗಿದ್ದೆ

**ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ 5 ಸಾವಿರ ರೂಪಾಯಿ ಕೊಟ್ಟು ದಾವಣಗೆರೆ ಕ್ಲಬ್ ಸದಸ್ಯನಾಗಿದ್ದೆ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನೆನಪಿಸಿಕೊಂಡರು. ಸದಸ್ಯರನ್ನಾಗಿ ಮಾಡುವಂತೆ ಸೋಮನಾಥ ಆರಾಧ್ಯ ಅವರ ಬಳಿ ಕೇಳಿಕೊಂಡಿದ್ದೆ. ನನ್ನ ಜೊತೆ ಇದ್ದ 35 ಸ್ನೇಹಿತರಿಗೂ ಸದಸ್ಯತ್ವ ನೀಡುವಂತೆ ಕೇಳಿದ್ದೆ. ಅವರು ಎಲ್ಲರಿಗೂ ಸದಸ್ಯತ್ವ ನೀಡಿದ್ದರು. ಅವರನ್ನು ಇಂದು ನೆನೆಯಲೇ ಬೇಕಿದೆ ಎಂದು ಎಸ್ಸೆಸ್ಸೆಂ ಹೇಳಿದರು. ಅಂದಿನಿಂದ ಇಂದಿನವರೆಗೂ ಕ್ಲಬ್ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.**

# ಉಪೇಂದ್ರ ವಿರುದ್ಧ ಜಾತಿ ನಿಂದನೆ ಆರೋಪ; ಎಫ್.ಐ.ಆರ್. ದಾಖಲು



ಬಾಯಿ ತಪ್ಪಿ ಗಾದೆ ಮಾತು ಬಳಸಿದ್ದಕ್ಕೆ ಕ್ಷಮೆ ಯಾಚಿಸಿದ್ದೇನೆ ಎಂದ ನಟ

ಬೆಂಗಳೂರು, ಆ. 13 - ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೋ ನೇರ ಪ್ರಸಾರದ ವೇಳೆ ನಟ ಉಪೇಂದ್ರ ಬಳಸಿದ ಪದ ಜಾತಿ ನಿಂದನೆ ಎಂದು ಬೆಂಗಳೂರಿನ ಚನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ಸಹಾಯ ನಿರ್ದೇಶಕ ಕೆ.ಎನ್. ಮಧುಸೂದನ್ ಅವರು ದೂರು ನೀಡಿದ್ದಾರೆ. ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ಆರೋಪಿ ಉಪೇಂದ್ರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ನೇರಪ್ರಸಾರದ ವೇಳೆಯಲ್ಲಿ ನಟ ಉಪೇಂದ್ರ ಅವರು ಜಾತಿ ನಿಂದನೆ ಪದ ಬಳಕೆ ಮಾಡಿದ್ದಾರೆ. ಇದರ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಅದನ್ನು ಗಮನಿಸಿ ಹಲವರು ದೂರು ನೀಡಿದ್ದಾರೆ. ನಟ ಉಪೇಂದ್ರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ ಎಂದು ಮಧುಸೂದನ್ ದೂರಿನಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಉಪೇಂದ್ರ, ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೋ ನೇರ ಪ್ರಸಾರದ ಸಂದರ್ಭದಲ್ಲಿ ಬಾಯಿತಪ್ಪಿ ಒಂದು ಗಾದೆ ಮಾತು ಬಳಸಿದೆ. ಅದರಿಂದ ಹಲವರ ಭಾವನೆಗಳಿಗೆ ಧಕ್ಕೆ ಉಂಟಾಗಿರುವುದು ಕಂಡು ಬಂದ ತಕ್ಷಣವೇ ನೇರಪ್ರಸಾರದ ವಿಡಿಯೋವನ್ನು ಅಳಿಸಿ ಹಾಕಿದ್ದೇನೆ. ನನ್ನ ಈ ಮಾತಿಗೆ ಕ್ಷಮೆಯಿರಲಿ ಎಂದಿದ್ದಾರೆ.

ಬಾಲ್ಯದಲ್ಲಿ ನಾನು ಕಂಡ ಆ ಕ್ರೂರ ಬಡತನ, ನನ್ನ ಕಣ್ಣ ಮುಂದೆಯೇ ಬೆಂಕಿ ಹಚ್ಚಿಕೊಂಡು ಆದ ಆತ್ಮಹತ್ಯೆಗಳು, ಹಸಿವು, ಅಪಮಾನ, ತುಳಿತ .... ಎಲ್ಲವನ್ನೂ ಅನುಭವಿಸಿದ್ದೇನೆ. ಇಂಥ ಪರಿಸರದಲ್ಲಿ ಬೆಳೆದ ನಾನು ಇಂದು ಒಂದು ವರ್ಗದ ಜನರ ಬಗ್ಗೆ ಅವಮಾನಕಾರಿಯಾಗಿ ಮಾತನಾಡುತ್ತೇನೆಯೇ? ನನಗೆ ಹುಚ್ಚೇ? ಅದಕ್ಕೆ ಕಾರಣವಾದರೂ ಏನು? ಅದರಿಂದ ನನಗೆ ಸಿಗುವ ಲಾಭವಾದರೂ ಏನು? ಇಷ್ಟಕ್ಕೂ ಕ್ಷಮೆಯನ್ನು ಸ್ವೀಕರಿಸುವ ದೊಡ್ಡತನವೂ ಇಲ್ಲವೇ? ಯಾಕೆ ಇಷ್ಟೊಂದು ದ್ವೇಷ? ಎಂದೂ ಅವರು ಪ್ರಶ್ನಿಸಿದ್ದಾರೆ.

# ಮಹಾರಾಷ್ಟ್ರ : ಆಸ್ಪತ್ರೆಯಲ್ಲಿ 18 ಸಾವು

ಥಾಣೆ, ಆ. 13 – ಮಹಾರಾಷ್ಟ್ರದ ಥಾಣೆಯ ಛತ್ರಪತಿ ಶಿವಾಜಿ ಮಹಾರಾಜ್ ಆಸ್ಪತ್ರೆಯಲ್ಲಿ ಕಳೆದ 24 ಗಂಟೆಗಳಲ್ಲಿ 18 ಜನ ಸಾವನ್ನಪ್ಪಿದ್ದಾರೆ. ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ. ಮೃತರಲ್ಲಿ 10 ಮಹಿಳೆಯರು ಹಾಗೂ ಎಂಟು ಪುರುಷರು ಸೇರಿದ್ದಾರೆ. ಮೃತರಲ್ಲಿ 12 ಜನರ ವಯಸ್ಸು 50ಕ್ಕಿಂತ ಹೆಚ್ಚಾಗಿದೆ.

# ಎಂ.ಸಿ. ಕಾಲೋನಿ ನಾಗರಿಕರ ಹಿತರಕ್ಷಣಾ ಸಮಿತಿ ಅಧ್ಯಕ್ಷರಾಗಿ ಅಂದನೂರು ಮುಪ್ಪಣ್ಣ



ದಾವಣಗೆರೆ,ಆ.13- ಇಲ್ಲಿನ ಎಂ.ಸಿ. ಕಾಲೋನಿ 'ಬಿ' ಬ್ಲಾಕ್‌ನ ನಾಗರಿಕರ ಹಿತರಕ್ಷಣಾ ಸಮಿತಿ ಅಧ್ಯಕ್ಷರಾಗಿ ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರಾಗಿ ಬಿ.ಹೆಚ್.ಪರಶುರಾಮಪ್ಪ, ಹುಲ್ಲತ್ತಿ ಎಸ್.ಸಿ, ಕಾರ್ಯದರ್ಶಿಯಾಗಿ ವಸಂತ್ ಶಾಮನೂರು, ಜಂಟಿ ಕಾರ್ಯದರ್ಶಿಯಾಗಿ ಎಸ್.ಬಸವರಾಜ್ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಕೆ.ಎಸ್. ಮಹೇಶ್ವರಪ್ಪ, ಎಸ್.ಟಿ.ಕುಸುಮ ಶೆಟ್ಟಿ, ಎಸ್.ಗುರುಮೂರ್ತಿ, ಜಿ.ಎಸ್.ಅಜ್ಜಪ್ಪ, ಕೆ.ಎಸ್.ನಾಗಭೂಷಣ್ ಕಡೇಕೊಪ್ಪ, ಕೆ.ಹಾಲಪ್ಪ, ದೇವೇಂದ್ರಪ್ಪ ಕೆ.ಸಿ., ರವೀಂದ್ರ ನಾಥ್ ಕೆ.ಇ, ಆರ್.ಜಿ.ದಾನೇಶ್ ಮತ್ತು ಚಂದನ್ ಪಲ್ಲಾಗಟ್ಟಿ ಆಯ್ಕೆಯಾಗಿದ್ದಾರೆ.

ವಿಶೇಷ ಆಹ್ವಾನಿತರಾಗಿ ಎಸ್.ಕೆ.ವೀರಣ್ಣ, ದೇವಾಚಾರ್, ಬಿ.ಎ.ಅಂಗಡಿ ಹಾಗೂ ಈ ಭಾಗದ ಪಾಲಿಕೆ ಸದಸ್ಯರುಗಳಾದ ಗೌರಮ್ಮ ಗಿರೀಶ್, ರೇಖಾ ಜಿ. ಸುರೇಶ್, ಕೆ ಪ್ರಸನ್ನಕುಮಾರ್, ಮಂಜುನಾಥ ಗಡಿಗುಡಾಳ್ ಅವರು ಗೌರವ ಸದಸ್ಯರಾಗಿದ್ದಾರೆ.

# ಶರಣ ಸಾಹಿತ್ಯ ಅನುಸರಣೆಯಿಂದ ಜೀವನ ಮೌಲ್ಯ ಹೆಚ್ಚಳ: ಶ್ರೀ ಶಿವಾನಂದ ಗುರೂಜಿ



ದಾವಣಗೆರೆ, ಆ.13- ಶರಣ ಸಾಹಿತ್ಯವನ್ನು ಅನುಸರಣೆ ಮಾಡುವುದರಿಂದ ಜೀವನ ಮೌಲ್ಯ ಹೆಚ್ಚಳವಾಗುತ್ತದೆ. ಪ್ರಕೃತಿಯ ಪ್ರತಿಬಿಂಬ ಶರಣ ಸಾಹಿತ್ಯ ಪರಿಷತ್ತಿನಲ್ಲಿದೆ ಎಂದು ಶಿರಮಗೊಂಡನಹಳ್ಳಿ ಬಸವ ಗುರುಕುಲ ತಪೋವನದ ಶ್ರೀ ಶಿವಾನಂದ ಗುರೂಜಿ ಹೇಳಿದರು.

ನಗರದ ಎ.ಆರ್.ಜಿ. ಕಾಲೇಜಿನಲ್ಲಿ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಲಿಂ. ಫ.ಗು. ಹಳಕಟ್ಟಿ ಅವರ ಜಯಂತ್ಯುತ್ಸವ ಮತ್ತು ದತ್ತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬುದ್ಧಿ ಪ್ರಾಬಲ್ಯ ಹೊಂದಿದ ಬಹುತೇಕರು ಇಂದಿಗೂ ಸಹ ಪುರಾಣ ಕಾಲದಿಂದ ಬಂದಂತಹ ದೇವರನ್ನು ಪೂಜಿಸುತ್ತಿದ್ದಾರೆ. ಬಸವಣ್ಣನವರು ಹೇಳಿದ ಇಷ್ಟಲಿಂಗ ಪೂಜೆ ಮಾಡುತ್ತಿಲ್ಲ. ಅಜ್ಞಾನದ ತೊಟ್ಟಿಲನ್ನು ತೊಡೆದು ಹಾಕಿ, ನಿಜವಾದ ಜ್ಞಾನ ಅರಿತರೆ, ವಚನ ಸಾಹಿತ್ಯ ತಿಳಿದುಕೊಂಡರೆ ಅದರಿಂದ ಸಮಾಜ ಸುಧಾರಣೆ ಆಗಲಿದೆ ಎಂದರು.

ನಮ್ಮತನ ಕಳೆದುಕೊಂಡಿರುವ ಇಂದಿನ ಹಬ್ಬ, ಹರಿದಿನಗಳು ಪ್ರಾಯಶ್ಚಿತದ ಆಚರಣೆಗಳಾಗಿವೆ. ಶರಣ ಸಾಹಿತ್ಯ ಒಂದರಿಂದಲೇ ಪಶ್ಚಾತ್ತಾಪ ಸಿಗಲಿದೆ ಎಂದು ಹೇಳಿದರು.

ಅರಿವು, ಆಚಾರ, ಅನುಭಾವ, ಕಾಯಕ ಮತ್ತು ದಾಸೋಹ ಈ ಪಂಚ ತತ್ವಗಳೇ ಎಲ್ಲ ವಚನ ಸಂಪುಟದ ಆಶಯವಾಗಿದೆ. ಈ ಎಲ್ಲಾ ತತ್ವಗಳನ್ನು ಪ್ರತಿಯೊಬ್ಬರೂ ಪಾಲಿಸಿದರೆ ಕುಟುಂಬ ಸಮಾಜದೊಂದಿಗೆ ದೇಶದ ಪ್ರಗತಿ ಸಾಧ್ಯವಾಗಲಿದೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಚನ ಸಂಶೋಧಕ ಫ.ಗು. ಹಳಕಟ್ಟಿ ಅವರ ಪರಿಶ್ರಮದಿಂದಾಗಿ ಶರಣರ ಅಮೂಲ್ಯ ವಚನಗಳು ನಮಗಿಂದು ಸುಲಭವಾಗಿ ಸಿಗುತ್ತಿವೆ. ವಚನ ಸಂರಕ್ಷಣೆಯ ಪರಂಪರೆಯನ್ನು ನಾವು ಮುಂದುವರೆಸಿಕೊಂಡು ಹೋಗಬೇಕಾಗಿದೆ ಎಂದು ಹೇಳಿದರು.

ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಕದಳಿ ಮಹಿಳಾ ವೇದಿಕೆ ಜಿಲ್ಲಾಧ್ಯಕ್ಷೆ ವಿನೋದ ಅಜಗಣ್ಣನವರ್, ಎ.ಆರ್.ಜಿ. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಕೆ.ಬೊಮ್ಮಣ್ಣ, ಕನ್ನಡ ವಿಭಾಗದ ಮುಖ್ಯಸ್ಥ ಡಿ.ಬಿ. ಬಸವರಾಜ್, ಉಪನ್ಯಾಸಕಿ ಎನ್.ಬಿ. ಜಯಶೀಲಾ ಮತ್ತಿತರರು ಭಾಗವಹಿಸಿದ್ದರು.

# ಸಿರಿಗೆರೆ : ಇಂದು ಸದ್ಧರ್ಮ ನ್ಯಾಯಪೀಠದ ಕಲಾಪ ಇಲ್ಲ



ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರು ಅಮೆರಿಕಾ, ಜರ್ಮನಿ, ಆಸ್ಟ್ರಿಯಾ ಮುಂತಾದ ದೇಶಗಳಲ್ಲಿ ನಡೆಯುವ ಅಂತರರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತೆರಳಿದ್ದು, ಈ ಕಾರಣದಿಂದಾಗಿ ಇಂದಿನ ಸದ್ಧರ್ಮ ನ್ಯಾಯಪೀಠದ ಕಾರ್ಯಕಲಾಪಗಳು ನಡೆಯುವುದಿಲ್ಲ ಎಂದು ಪೀಠದ ಕಾರ್ಯದರ್ಶಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 08194-268829, 268848.

# ಆರೋಗ್ಯ ವ್ಯವಸ್ಥೆ ರೋಗಿಯಾಗಿದೆ ಎಂದ ಮಲ್ಲಿಕಾರ್ಜುನ ಖರ್ಗೆ

## ಎಐಐಎಂಎಸ್‌ಗಳಲ್ಲಿ ಸಿಬ್ಬಂದಿ ಕೊರತೆ ಇಲ್ಲ ಎಂದ ಮಾಂಡವೀಯ

ನವದೆಹಲಿ, ಆ. 13 - ಎ.ಐ.ಐ.ಎಂ.ಎಸ್.ಗಳು ಸಿಬ್ಬಂದಿ ಕೊರತೆಯಿಂದ ಬಳಲುತ್ತಿರುವ ಮಧ್ಯೆ ಹೇಳಿಕೆ ನೀಡಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ದೇಶದ ಆರೋಗ್ಯ ವ್ಯವಸ್ಥೆಯನ್ನು ರೋಗಗ್ರಸ್ಥ ಮಾಡಲಾಗಿದೆ ಎಂದಿದ್ದಾರೆ. ಸರ್ಕಾರ ಹಲವಾರು ಎ.ಐ.ಐ.ಎಂ.ಎಸ್.ಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳುತ್ತಿದೆ. ಆದರೆ, ದೇಶದ 19 ಎ.ಐ.ಐ.ಎಂ.ಎಸ್.ಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆ ಇದೆ ಎಂದು ಖರ್ಗೆ ಹೇಳಿದ್ದಾರೆ. ಆದರೆ, ಆರೋಪ ತಳ್ಳಿ ಹಾಕಿರುವ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ, ಕಾಂಗ್ರೆಸ್ ಆಡಳಿತದಲ್ಲಿ ಕೇವಲ ಒಂದು ಎ.ಐ.ಐ.ಎಂ.ಎಸ್. ಆರಂಭಿಸಲಾಗಿತ್ತು. ಮೋದಿ ಸರ್ಕಾರ 15 ಎ.ಐ.ಐ.ಎಂ.ಎಸ್.ಗಳನ್ನು ಆರಂಭಿಸಿದೆ ಎಂದಿದ್ದಾರೆ. ಎ.ಐ.ಐ.ಎಂ.ಎಸ್.ಗಳ ಅಗತ್ಯಕ್ಕೆ ಅನುಗುಣವಾಗಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಹೊಸ ವಿಭಾಗಗಳನ್ನು ಕಾಲಕಾಲಕ್ಕೆ ತೆರೆದು ನೇಮಕ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

# ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ಮಧು



ರಾಣೇಬೆನ್ನೂರು, ಆ. 13 - ಇಲ್ಲಿಯ ನಗರಸಭೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಚುನಾವಣೆ ಶನಿವಾರ ಜರುಗಿತು. ನೂತನ ಅಧ್ಯಕ್ಷರಾಗಿ ಎನ್. ಮಧು ಕೋಳಿವಾಡ ಹಾಗೂ ಉಪಾಧ್ಯಕ್ಷರಾಗಿ ಸಿ.ಬಿ. ರಾಮಾಳದ ಅವಿರೋಧವಾಗಿ ಆಯ್ಕೆಯಾದರು.


VISION INTERNATIONAL SCHOOL
KARUR DAVANAGERE

Walk in Interview

Invites Application for the following Posts of English Medium School

| Qualification | Subject | Medium | Post |
|---|---|---|---|
| B.Sc/B.Ed | Maths & Science | English | 2+3 |
| BA/B.Ed | English | English | 02 |
| BA/B.Ed | Social Science | English | 01 |
| BA/B.Ed | Kannada | Kannada | 01 |
| BA/B.Ed | Drawing | Drawing | 02 |
| BA/B.PEd | Physical Education M-01, F-01 | English | 02 |
| BA/B.Ed | Hindi | Hindi | 02 |

3 Yrs Experience Compulsory. Send your Resume to
mohammedsajjad4u@gmail.com
Walk in Interview on 16th & 17th Aug 2023 Time: 10.30 AM

Venue: VISION INTERNATIONAL SCHOOL
Near D.C. Office, Karur Industrial Area, Davanagere
M: 81478 42687, 99643 27490.



ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಮಂಡಿಪೇಟೆಯಲ್ಲಿರುವ ಮೆಡಿಕಲ್ ಎಂಪೋರಿಯಂ ಮಾಲೀಕರೂ, ನಮ್ಮ ಆತ್ಮೀಯ ಗೆಳೆಯರೂ ಆದ

ಶ್ರೀ ಹರೀಶ್ ಎನ್.ನಾಯಕ್

ಅವರು ದಿನಾಂಕ 13.08.2023ರ ಭಾನುವಾರ ರಾತ್ರಿ 11.20ಕ್ಕೆ ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಚಿರಂಜೀವಿ ವಿದ್ಯಾಮಂದಿರದ ಬಾಲ್ಯ ಸ್ನೇಹಿತರು



11ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಬಸಮ್ಮ ಮಾಗಿ
(ದಿ|| ವೀರಬಸಪ್ಪ ಮಾಗಿ ಅವರ ಧರ್ಮಪತ್ನಿ)

*"ನಿಮ್ಮ ನೆನಪು ಸದಾ ಹಚ್ಚ ಹಸಿರು
ನಿಮ್ಮ ಆದರ್ಶವೇ ನಮಗೆ ದಾರಿದೀಪ
ನಿಮ್ಮ ಮಾರ್ಗದರ್ಶನವೇ ನಮಗೆ ಚೇತನ"*

ಸದಾ ಸ್ಮರಿಸುವ...

- ಶ್ರೀಮತಿ ಲತಾ ಮತ್ತು ಪಂಚಾಕ್ಷರಿ
- ಶ್ರೀಮತಿ ರೂಪಾ ಮತ್ತು ಕೈಲಾಸ್ ಬಾಬು ಮಾಗಿ
- ಶ್ರೀಮತಿ ದಾನೇಶ್ವರಿ ಮತ್ತು ಎಂ.ವಿ. ಜಯಪ್ರಕಾಶ್ ಮಾಗಿ
- ಶ್ರೀಮತಿ ಶಿವಲೀಲಾ ಮತ್ತು ರಾಜೇಶ್

ಮೊಮ್ಮಕ್ಕಳು :

✦ ಮಮತ ✦ ಗಣೇಶ್ ✦ ನಿಖಿಲ್ ಮಾಗಿ
✦ ಹರ್ಷ ಮಾಗಿ ✦ ಕಿಶೋರ್ ಮಾಗಿ
✦ ದಿಶಾ ✦ ಶ್ರೇಯಸ್

ಹಾಗೂ ಮಾಗಿ ಕುಟುಂಬ ವರ್ಗದವರು, ದಾವಣಗೆರೆ

- ರೈಸ್ ಕಾರ್ನರ್
- ಹರ್ಷ ಕಮರ್ಷಿಯಲ್ಸ್
- ಜೆ.ಪಿ. ಎಂಟರ್‌ಪ್ರೈಸಸ್

ಗುಜರಿ ಲೈನ್ ಚೌಕಿಪೇಟೆ ಹಿಂಭಾಗ, ದಾವಣಗೆರೆ.